ಕಲ್ಯಾಣ ಕರ್ನಾಟಕದ ಪ್ರತಿಬಿಂಬ......
ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

"VARTHA LOKA" Kannada Daily Morning News Paper, VIJAYNAGAR. Dist.: Vijaynagar
ಕನ್ನಡ ದಿನಪತ್ರಿಕೆ

ಕೊಪ್ಪಳ | ರಾಯಚೂರು | ಬಳ್ಳಾರಿ | ವಿಜಯನಗರ | ಯಾದಗಿರಿ | ಬೆಂಗಳೂರು | ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜ.
ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜ.

ವಾರ್ತಾ ಲೋಕ
ಕನ್ನಡ ದಿನ ಪತ್ರಿಕೆ ಕಛೇರಿ
ರಾಜಾಸಾಬ ಕಂಪೌಂಡ್,
ಕುಲಾಯಪ್ಪ ಬಿಲ್ಡಿಂಗ್
ಎದುರುಗಡೆ, 1ನೇ ಕ್ರಾಸ್
ಪಟೇಲ್ ನಗರ,
ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 147 | Wednesday 23-10-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

## ಸಂಕ್ಷಿಪ್ತ ವಾರ್ತೆ

### ಪಟಾಕಿಗೆ ಕಡಿವಾಣ : ಕಾಂಗ್ರೆಸ್ ಸರ್ಕಾರ ಹಿಂದೂಗಳ ಧಾರ್ಮಿಕ ಸ್ವಾತಂತ್ರ್ಯ ಕಸಿದುಕೊಳ್ಳುತ್ತಿದೆ ಎಂದು ಆಕ್ರೋಶ



● ವಾರ್ತಾಲೋಕ ವಾರ್ತೆ

**ಬೆಂಗಳೂರು ;** ರಾಜ್ಯ ಸರಕಾರ ದೀಪಾವಳಿ ನಿಮಿತ್ತ ರಾಜ್ಯಾದ್ಯಂತ ಮಹತ್ವದ ಆದೇಶ ಹೊರಡಿಸಿದ್ದು, ರಾತ್ರಿ 8 ರಿಂದ 10 ಗಂಟೆವರೆಗೆ ಮಾತ್ರ ಪಟಾಕಿ ಸಿಡಿಸಲು ಅವಕಾಶ ನೀಡಿದೆ. ಪಟಾಕಿಗಳಿಂದ ಪರಿಸರ ಮಾಲಿನ್ಯ ಆಗುತ್ತಿದ್ದು ಹಾಗಾಗಿ ಈ ಆದೇಶ ನೀಡಲಾಗಿದೆ ಎಂದು ರಾಜ್ಯ ಸರಕಾರ ಹೇಳಿದೆ.

ಕೇವಲ ಹಿಂದೂಗಳ ಹಬ್ಬ ದೀಪಾವಳಿಯಲ್ಲಿ ಸರಕಾರ ಪರಿಸರ ಮಾಲಿನ್ಯದ ಬೊಬ್ಬೆ ಹಾಕುತ್ತಿದ್ದು ಬೆಂಗಳೂರು ಸೇರಿದಂತೆ ರಾಜ್ಯದ ಮಹಾನಗರಗಳಲ್ಲಿ ವರ್ಷ ಪೂರ್ತಿ ವಾಹನಗಳಿಂದ ಉಂಟಾಗುತ್ತಿರುವ ಮಾಲಿನ್ಯ ತಡೆಯಲು ಯಾವ ಕ್ರಮ ಕೈಗೊಂಡಿದೆ ಎಂದು ಹಿಂದೂ ಜನಜಾಗೃತಿ ಸಮಿತಿಯ ವಕ್ತಾರ ಶರತ್ ಕುಮಾರ್ ಪ್ರಶ್ನಿಸಿದ್ದಾರೆ.ಗಣೇಶ ಚತುರ್ಥಿ ವೇಳೆಯೂ ಶಬ್ದ ಮಾಲಿನ್ಯದ ನೆಪವೊಡ್ಡಿ ಡಿಜೆಗೆ ನಿರ್ಬಂಧ ಹೇರಿತ್ತು, ಈಗ ಪುನಃ ದೀಪಾವಳಿಯ ಆಚರಣೆಗೆ ಕಡಿವಾಣ ಹಾಕಿದ್ದು ಕಾಂಗ್ರೆಸ್ ಹಿಂದೂಗಳ ಧಾರ್ಮಿಕ ಸ್ವಾತಂತ್ರ್ಯ ಕಸಿದುಕೊಳ್ಳುತ್ತಿದೆ. ಹಿಂದೂ ಸಮಾಜ ಇದನ್ನು ಎಂದಿಗೂ ಸಹಿಸುವುದಿಲ್ಲ. ಈ ಆದೇಶ ಕೂಡಲೇ ಹಿಂಪಡೆಯದಿದ್ದರೆ ಸಮಸ್ತ ಹಿಂದೂ ಸಂಘಟನೆಗಳು ಒಟ್ಟಾಗಿ ಪ್ರತಿಭಟನೆ ನಡೆಸಬೇಕಾಗುವುದು ಎಂದು ಕಿಡಿಕಾರಿದ್ದಾರೆ.

### ರಾಷ್ಟ್ರೀಯ ಈಜು ಸ್ಪರ್ಧೆಯಲ್ಲಿ ಎಲ್. ಗೋಪಿಚಂದ್ ಗೆ ಮೂರು ಬೆಳ್ಳಿ ಪದಕ




● ವಾರ್ತಾಲೋಕ ವಾರ್ತೆ



**ಬಳ್ಳಾರಿ.ಅ.22** ಜಿಲ್ಲೆಯ ಸಂಡೂರು ತಾಲೂಕಿನ ದರೋಜಿ ಗ್ರಾಮದ ನಿವಾಸಿಯಾದ ಎಲ್. ಗೋಪಿಚಂದ್ ಇತ್ತೀಚೆಗೆ ಗೋವಾದಲ್ಲಿ ನಡೆದ ಪ್ಯಾರಲಂಪಿಕ್ ಈಗ ಸ್ಪರ್ಧೆಯಲ್ಲಿ ಮೂರು ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ.

ಗೋಪಿಚಂದ್ ಅವರು ಪ್ರತಿ ದಿನ ಪರಿಶ್ರಮದ ಮೂಲಕ ಏನಾದರು ಒಂದು ಸಾಧನೆ ಮಾಡಬೇಕೆಂಬ ಛಲದಿಂದ ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಯಲ್ಲಿ ಭಾಗವಹಿಸಿ ಹಲವಾರು ಮೆಡಲ್ ಗಳನ್ನು ಮತ್ತು ಪದಕಗಳನ್ನು ಗೆದ್ದು ರಾಜ್ಯದ ಕ್ರೀಡಾ ಕ್ಷೇತ್ರದಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ.

ಗೋವಾದಲ್ಲಿ ನಡೆದ ರಾಷ್ಟ್ರೀಯ ಮಟ್ಟದ 2023-24 ಈಜುವ ಸ್ಪರ್ಧೆಯಲ್ಲಿ 3.42.200 ಮೀ ವೈಯಕ್ತಿಕ ಮಿಡ್ಲಿಯಲ್ಲಿ ಎರಡನೇ ಸ್ಥಾನ ಪಡೆದು ಸುಮಾರು ಮೂರು ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ.

ಮೂಲತಃ ಇವರು ಬಳ್ಳಾರಿ ಜಿಲ್ಲೆ ಸಂಡೂರು ತಾಲೂಕಿನ ಹೊಸ ದರೋಜಿ ಗ್ರಾಮದ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಶ್ರೀವಾಸವಿ ಕ್ಯಾಂಪ್ ಪಿಯು ಕಾಲೇಜ್ ನಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದು, ಈಜುವ ತರಬೇತಿಯನ್ನು ಅಕ್ಕ ರಜಿನಿ ಮತ್ತು ಅರ್ಜುನ್ ಪ್ರಶಸ್ತಿ ಪುರಸ್ಕೃತರಾದ ಶರತ್ ಗಾಯಕ್ ವಾಡ್ ಇವರು ತರಬೇತಿಯನ್ನು ನೀಡುತ್ತಿದ್ದಾರೆ.

ಗೋಪಿಚಂದ್ ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಿದ ಇವರದ್ದಾಗಿವೆ. ಇವರು ಕೈರೋ ಅಂತರಾಷ್ಟ್ರೀಯ ಏಷ್ಯನ್ ಯೂತ್ ಪ್ಯಾರಾ ಗೇಮ್ಸ್ (ಬಹ್ರೇನ್ 2021), ಓಪನ್ ಇಂಟರ್ನ್ಯಾಷನಲ್ ಪ್ಯಾರಾ ಈಜು (ಈಜಿಪ್ಟ್ 2022), ಚೀನಾದ ಹ್ಯಾಂಗ್‌ಝೌನಲ್ಲಿ ಏಷ್ಯನ್ ಪ್ಯಾರಾ ಗೇಮ್ಸ್ (ಚೀನಾ 2023), ಏಷ್ಯನ್ ಯೂತ್ ಪ್ಯಾರಾ ಸ್ಪೋರ್ಟ್ಸ್ ಕ್ಯಾಂಪ್ (ಕೊರಿಯಾ 2023) ಅಲ್ಲದೆ ಇನ್ನೂ ಅನೇಕ ಭಾಗಗಳಲ್ಲಿ ನಡೆದ ಈಜು ಸ್ಪರ್ಧೆಯಲ್ಲಿ. ಭಾಗಹಿಸಿ 31 ಚಿನ್ನ ಎಂಟು ಬೆಳ್ಳಿ ಪದಕ ಸೇರಿದಂತೆ ಒಟ್ಟು 39 ಪದಗಳನ್ನು ಗೆದ್ದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಗೋಪಿಚಂದ್ ಕುಟುಂಬ ಕೂಲಿ ಕಾರ್ಮಿಕ ಕೆಲಸ ಮಾಡುತ್ತಿದ್ದು ಇವರ ಪುತ್ರ ಗೋಪಿಚಂದ್ ಅವರು ಮುಂದಿನ ಹಲವು ರಾಜ್ಯಗಳಲ್ಲಿ ಭಾಗವಹಿಸಲು ತಮ್ಮಿಂದ ಸಹಾಯ ಸಹಕಾರ ನೀಡಬೇಕೆಂದು ಅವರ ತಂದೆ ರಾಜಶೇಖರ್ (ದೂರವಾಣಿ ಸಂಖ್ಯೆ 9916431817) ಪತ್ರಿಕೆಯ ಮೂಲಕ ಮನವಿ ಮಾಡಿದ್ದಾರೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಭೇಟಿ, ನೂತನ ಜಿಲ್ಲಾ ಆಸ್ಪತ್ರೆ ಕಟ್ಟಡ ಪರಿಶೀಲನೆ, ಅನಾವಶ್ಯಕ ಸಿಂಗಾರ ಬೇಡ, ಶೀಘ್ರ ಕಟ್ಟಡ ಕಾಮಗಾರಿ ಪೂರ್ಣಗೊಳಿಸಲು ಸೂಚನೆ





● ವಾರ್ತಾಲೋಕ ವಾರ್ತೆ

**ಹೊಸಪೇಟೆ (ವಿಜಯನಗರ) ಅಕ್ಟೋಬರ್ 22 (ಕ.ವಾ):** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರಾದ ದಿನೇಶ್ ಆರ್. ಗುಂಡೂರಾವ್ ಅವರು ವಿಜಯನಗರ ಹೊಸಪೇಟೆಯಲ್ಲಿ ನಿರ್ಮಾಣವಾಗುತ್ತಿರುವ ಜಿಲ್ಲಾ ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ಅಕ್ಟೋಬರ್ 22 ರಂದು ಶಾಸಕರೊಂದಿಗೆ ಪರಿಶೀಲನೆ ನಡೆಸಿದರು.

ನೂತನ ಜಿಲ್ಲೆಯಾದ ನಂತರ ಜಿಲ್ಲಾ ಆಸ್ಪತ್ರೆ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಸುಸಜ್ಜಿತ ಆಸ್ಪತ್ರೆ ಇಲ್ಲದೆ ಅಕ್ಕಪಕ್ಕದ ಜಿಲ್ಲೆಗಳಿಗೆ ಉನ್ನತ ಚಿಕಿತ್ಸೆಗಾಗಿ ತೆರಳಬೇಕಾಗಿದೆ.

ಆದಷ್ಟು ಬೇಗ ಜಿಲ್ಲಾಸ್ಪತ್ರೆ 300 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆ ನಿರ್ಮಾಣದವಾದರೆ ಇಲ್ಲಿಯೇ ತುರ್ತು ಚಿಕಿತ್ಸೆ, ಶಸ್ತ್ರಚಿಕಿತ್ಸೆ ಸೇರಿದಂತೆ ಇತರೆ ಚಿಕಿತ್ಸೆ ಸಿಗುವುದರಿಂದ ಜನರಿಗೆ ಅನುಕೂಲವಾಗಲಿದೆ. ಸಚಿವರು ನಿರ್ಮಾಣ ಪ್ರಗತಿ ಪರಿಶೀಲಿಸಿದರು.



ನಂತರ, ಅಧಿಕಾರಿಗಳೊಂದಿಗೆ ಮಾತನಾಡಿದ ಅವರು, ಯಾವುದೇ ದುಂದು ವೆಚ್ಚಕ್ಕೆ ಅನುವು ಮಾಡದಿರಿ. ಅನಾವಶ್ಯಕವಾದ ಅಲಂಕಾರವನ್ನು ಮಾಡಬೇಡಿ. ನೈಸರ್ಗಿಕವಾಗಿ ಗಾಳಿ, ಬೇಳಕು ಹೆಚ್ಚು ಬರುವ ಹಾಗೆ ಅವಕಾಶ ಮಾಡಿ ಎಂದು ಅಧಿಕಾರಿಗಳಿಗೆ ಸಲಹೆ ಮಾಡಿದರು.

ವಿವಿಧ ಕಾಮಗಾರಿಗಳಿಗೆ ಚಾಲನೆ: ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ 85.44 ಲಕ್ಷ ವೆಚ್ಚದಲ್ಲಿ ಫೇವರ್ಸ್ ಅಳವಡಿಸುವ ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ, 300 ಹಾಸಿಗೆಯ ಆಸ್ಪತ್ರೆಗೆ 2ಕೋಟಿ ವೆಚ್ಚದಲ್ಲಿ ಕಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿ ಮತ್ತು ಜಿಲ್ಲೆಯ ಹೊಸಪೇಟೆ ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ 47.79 ಲಕ್ಷ ವೆಚ್ಚದಲ್ಲಿ ಫೇವರ್ಸ್ ಅಳವಡಿಸುವ ಮತ್ತು ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿಗೆ ಇದೇ ವೇಳೆ ಸಚಿವರು ಶಂಕುಸ್ಥಾಪನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ವಿಜಯನಗರ ಶಾಸಕರಾದ ಹೆಚ್.ಆರ್.ಗವಿಯಪ್ಪ, ಡಾ.ಎನ್.ಟಿ.ಶ್ರೀನಿವಾಸ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಹರ್ಷಗುಪ್ತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಾದ ಶಿವಕುಮಾರ ಕೆ.ವಿ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್. ಎನ್.ಎಫ್. ಇಮಾಮ್ ನಿಯಾಜಿ, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಮತ್ತು ಡಿ.ಹೆಚ್.ಓ ಡಾ.ಶಂಕರ್ ನಾಯ್ಕ ಹಾಗೂ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

## ಹಾಲಸಾಗರಹಟ್ಟಿ ಗ್ರಾಮದಲ್ಲಿ ಹುತಾತ್ಮರ ದಿನಾಚರಣೆ

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ22.**ದೇಶದ ಭದ್ರತೆ, ಸಾರ್ವಜನಿಕ ಆಸ್ತಿ-ಪಾಸ್ತಿ ರಕ್ಷಣೆಗಾಗಿ ಜೀವದ ಹಂಗು ತೊರೆದು ಹೋರಾಡಿ ವೀರ ಮರಣವನ್ನಪ್ಪಿದ ಪೊಲೀಸರಿಗೆ ಗೌರವ ನಮನ ಸಲ್ಲಿಸುವ ಸಲುವಾಗಿ ನಡೆದ ಪೊಲೀಸ್ ಹುತಾತ್ಮರ ದಿನ ಆಚರಣೆ ಕಾರ್ಯಕ್ರಮ ಹಾಲಸಾಗರಹಟ್ಟಿ ಗ್ರಾಮದ ಹುತಾತ್ಮ ಯೋಧ ಜಿ.ಕುಮಾರಸ್ವಾಮಿ ಸ್ಮಾರಕದ ಬಳಿ ಸೋಮವಾರ ಬಹಳ ಅರ್ಥಪೂರ್ಣವಾಗಿ ನಡೆಯಿತು.

ಪೊಲೀಸ್ ಹುತಾತ್ಮರ ದಿನದ ಸ್ಮರಣೆ ಅಂಗವಾಗಿ ಕೂಡ್ಲಿಗಿ ತಾಲೂಕಿನ ಹಾಲಸಾಗರಹಟ್ಟಿ ಗ್ರಾಮದಲ್ಲಿ ಗುಡೇಕೋಟೆ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅಪ್ಪಯ್ಯನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಜಯಣ್ಣ,

ಮೊದಲಿಗೆ ಗ್ರಾಮಸ್ಥರು,ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಗಣ್ಯರು ಹುತಾತ್ಮ ಪೊಲೀಸರಿಗೆ ಪುಷ್ಪಗುಚ್ಛ ಸಮರ್ಪಣೆ ಮಾಡಿದರು.

ಬಳಿಕ ಗುಡೇಕೋಟೆ ಪೋಲೀಸ್ ಠಾಣೆಯ ಎಎಸ್ಐ ಬಾಬಾ ಫಕೃದ್ದೀನ್ ಮಾತನಾಡಿ, ಕಾನೂನು ಸುವ್ಯವಸ್ಥೆಗಾಗಿ ಕರ್ತವ್ಯ ದಲ್ಲಿದ್ದ ಸಂದರ್ಭದಲ್ಲಿ ಹುತಾತ್ಮರಾದ ಪೊಲೀಸರನ್ನು ಮತ್ತು ಯೋಧರನ್ನು ಇಂದು ಸ್ಮರಣೆ ಮಾಡಲಾಗುತ್ತಿದೆ.

ರಾಜ್ಯದ 15 ಮಂದಿ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ 414 ಮಂದಿ ಪೊಲೀಸರು ಹುತಾತ್ಮರಾಗಿದ್ದಾರೆ. ಅವರುಗಳನ್ನು ಸ್ಮರಿಸುವುದು ಈ ದಿನದ ಉದ್ದೇಶವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಗ್ರಾಮದ ಮಾಜಿ ಸೈನಿಕ ಜಿ. ವೆಂಕಟೇಶ್ ಮಾತನಾಡಿ, ನಾಡಿನ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸರ ಪಾತ್ರ ಪ್ರಮುಖವಾಗಿದೆ. ನಾವೆಲ್ಲರು ಯಾವುದೇ ಭಯ-ಭೀತಿ ಇಲ್ಲದೆ ನೆಮ್ಮದಿ ಜೀವನ ನಡೆಸಲು ಪೊಲೀಸರು ಸಹ ಕಾರಣರಾಗಿದ್ದಾರೆ. ಹುತಾತ್ಮರಾದ ಪೊಲೀಸ್ ಕುಟುಂಬಕ್ಕೆ ಸರ್ಕಾರ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದರು.

ಈ ಸಂದರ್ಭದಲ್ಲಿ ಅಪ್ಪಯ್ಯನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಜಯಣ್ಣ, ಗುಡೇಕೋಟೆ ಪೋಲೀಸ್ ಠಾಣೆಯ ಎಎಸ್ಐ ಬಾಬಾ ಫಕೃದ್ದೀನ್,ಮಾಜಿ ಸೈನಿಕರಾದ ಜಿ.ವೆಂಕಟೇಶ್, ಗ್ರಾಮದ ಹಿರಿಯರಾದ ಜಿ.ಮಹಾದೇವಪ್ಪ, ಸಂಜೀವಪ್ಪ,ಜೆ.ಶಿವಕುಮಾರ್,ಜಿ. ಅಂಜಿನಪ್ಪ, ಸೇರಿದಂತೆ ಅನೇಕ ಮುಖಂಡರು ಗ್ರಾಮಸ್ಥರು ಉಪಸ್ಥಿತರಿದ್ದರು.

ವರದಿ ಎಚ್ ವೀರಣ್ಣ.

## ಸಿದ್ಧಾಂತ ಒಪ್ಪಿ ಬಂದರೆ ಸ್ವಾಗತ: ಸಿಎಂ



**ಮೈಸೂರು, :** ಕಾಂಗ್ರೆಸ್ ಪಕ್ಷದ ಸಿದ್ಧಾಂತವನ್ನು ಯಾರೇ ಒಪ್ಪಿ ಬಂದರೂ ಅವರಿಗೆ ಸ್ವಾಗತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುವ ಮೂಲಕ ಮಾಜಿ ಸಚಿವ ಸಿ.ಪಿ ಯೋಗೇಶ್ವರ್ ಕಾಂಗ್ರೆಸ್ ಸೇರ್ಪಡೆಯನ್ನು ಖಚಿತಪಡಿಸಿದ್ದಾರೆ.

ಮೈಸೂರಿನಲ್ಲಿಂದು ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸಿದ್ಧಾಂತ ಮತ್ತು ಸಂವಿಧಾನದ ಮೌಲ್ಯಗಳನ್ನು ಒಪ್ಪಿ ಬರುವವ-ರಿಗೆ ಸ್ವಾಗತ ಎಂದು ಸಿ.ಪಿ ಯೋಗೇಶ್ವರ್ ಕಾಂಗ್ರೆಸ್ ಸೇರಲು ಉತ್ಸುಕರಾಗಿರುವ ಬಗ್ಗೆ ಪ್ರತಿಕ್ರಿಯಿಸಿದರು.

ಚನ್ನಪಟ್ಟಣ ಕ್ಷೇತ್ರಕ್ಕೆ ಮಾಜಿ ಸಂಸದ ಡಿ.ಕೆ ಸುರೇಶ್ ಹೆಸರು ಕೂಡ ಇದೆ. ನಮ್ಮ ಪಕ್ಷದ ಅಧ್ಯಕ್ಷರೇ ಇಲ್ಲಿ ಇರುವ ಕಾರಣ ಅವರೇ ಸೂಕ್ತ ಅಭ್ಯರ್ಥಿಯನ್ನು ತೀರ್ಮಾನ ಮಾಡುತ್ತಾರೆ. ಒಳ್ಳೆ ಅಭ್ಯರ್ಥಿ ಹಾಕಬೇಕು ಎಂದು ಹೇಳಿದ್ದೇನೆ ಎಂದರು.

ತುಕಾರಾಂ ಪತ್ನಿಗೆ ಟಿಕೆಟ್

ಸಂಡೂರು ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಂಸದರಾದ ತುಕಾರಾಂ ಅವರ ಪತ್ನಿ ಅವ-ರಿಗೆ ಟಿಕೆಟ್ ನೀಡಲಾಗುವುದು. ಚನ್ನಪಟ್ಟಣದಲ್ಲಿ ಸೂಕ್ತ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎನ್ನುವ ಚರ್ಚೆ ಆಗಿದೆ. ಡಿ.ಕೆ.ಸುರೇಶ್ ಅವರೂ ಕೂಡ ಪ್ರಬಲ ಅಭ್ಯರ್ಥಿ ಆಗಿದ್ದಾರೆ. ಒಂದೆರಡು ದಿನಗಳಲ್ಲಿ ಚನ್ನಪಟ್ಟಣ ಮತ್ತು ಶಿಗ್ಗಾಂವ್ ಕ್ಷೇತ್ರದಲ್ಲಿ ಯಾರಿಗೆ ಟಿಕೆಟ್ ಎನ್ನುವುದು ಸ್ಪಷ್ಟವಾಗಲಿದೆ ಎಂದರು.

ಪ್ರಕೃತಿ ವಿಕೋಪದಿಂದ ಬಿದ್ದಿರುವ ಮಳೆ ಕಾರಣದಿಂದ ಆಗಿರುವ ಅನಾಹುತಗಳಿಗೆ ಪರಿಹಾರ ನೀಡುತ್ತೇವೆ. ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ನುಡಿದರು.

## ಕೂಡ್ಲಿಗಿ ಸಾರ್ವಜನಿಕ ಆಸ್ಪತ್ರೆಗೆ ಸಚಿವರ ಭೇಟಿ, 100 ರಿಂದ 150 ಹಾಸಿಗೆ ಆಸ್ಪತ್ರೆಯಾಗಿ ಮೇಲ್ದರ್ಜೆಗೆ

# ಸಾರ್ವಜನಿಕರ ಆರೋಗ್ಯಕ್ಕೆ ನಮ್ಮ ಆದ್ಯತೆ: ಸಚಿವ ದಿನೇಶ್ ಆರ್ ಗುಂಡೂರಾವ್

● ವಾರ್ತಾಲೋಕ ವಾರ್ತೆ





**ಹೊಸಪೇಟೆ (ವಿಜಯನಗರ) ಅಕ್ಟೋಬರ್ 22 (ಕ.ವಾ):** ಮನುಷ್ಯನ ಜೀವನದಲ್ಲಿ ಆರೋಗ್ಯ ಅತೀ ಮುಖ್ಯ. ಸಾರ್ವಜನಿಕರ ಆರೋಗ್ಯಕ್ಕೆ ನಮ್ಮ ಮೊದಲ ಆದ್ಯತೆಯಾಗಿದ್ದು ಕೂಡ್ಲಿಗಿ ಸಾರ್ವಜನಿಕ ಆಸ್ಪತ್ರೆಯನ್ನು 150 ಹಾಸಿಗೆಗೆ ಮೇಲ್ದರ್ಜೆಗೇರಿಸಲಾಗುತ್ತದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ದಿನೇಶ್ ಆರ್. ಗುಂಡೂರಾವ್ ಹೇಳಿದರು.

ಅವರು ಅಕ್ಟೋಬರ್ 22 ರಂದು ಕೂಡ್ಲಿಗಿಯ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದರು.

ತಾಲೂಕಿನಲ್ಲಿ ಸುಸಜ್ಜಿತ ಆಸ್ಪತ್ರೆ ಇದ್ದರೆ, ಸಾರ್ವಜನಿಕರು ಜಿಲ್ಲಾ ಆರೋಗ್ಯ ಕೇಂದ್ರಗಳಿಗೆ ಹೋಗುವ ಅವಶ್ಯಕತೆ ಇರುದಿಲ್ಲ. ಕೂಡ್ಲಿಗಿ ಪಟ್ಟಣದಲ್ಲಿ ಒಂದು ಉತ್ತಮ ಗುಣ ಮಟ್ಟದ ಆಸ್ಪತ್ರೆ ಮಾಡಲು ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು.

ಜನರಿಗೆ ಚಿಕಿತ್ಸೆಗೆ ಅಗತ್ಯವಿರುವ ವೈದ್ಯಕೀಯ ಪರಿಕರಗಳನ್ನು ಕಲ್ಪಿಸಲಾಗುತ್ತದೆ. ವೈದ್ಯರು ಸೇವೆ ಮಾಡುವ ಬದ್ದತೆ ಇರಬೇಕು. ಬಹುತೇಕ ಚಿಕಿತ್ಸೆಗಳು ತಾಲ್ಲೂಕು ಮತ್ತು ಸಮುದಾಯ ಆಸ್ಪತ್ರೆಯಲ್ಲಿ ಸಿಗಬೇಕಾಗಿದೆ. ಬೇರೆಡೆಯಿಂದ ಬರುವ ವೈದ್ಯರು ಸ್ಥಳೀಯವಾಗಿ ಕೆಲಸ ಮಾಡಲು ಅನುಕೂಲ ಆಗುವ ರೀತಿಯಲ್ಲಿ ಅವರಿಗೆ ವ್ಯವಸ್ಥೆ ಮಾಡಿಕೊಡಲಾಗುತ್ತದೆ, ತಾಲೂಕಿನಲ್ಲಿ ಆರೋಗ್ಯ ಕೇಂದ್ರಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಗುಡೆಕೋಟೆ ಪಿಹೆಚ್‌ಸಿಯನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲು ಬೇಡಿಕೆ ಇದ್ದು ಇದಕ್ಕೆ ಅನುದಾನದ ಕೊರತೆ ಇಲ್ಲ, ಸಿಬ್ಬಂದಿಯ ಮಂಜೂರಾತಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಮಂಜೂರಾತಿ ನೀಡಲಾಗುತ್ತದೆ ಎಂದು ಹೇಳಿದರು.

ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ. ಎನ್.ಟಿ.ಶ್ರೀನಿವಾಸ್ ಅವರು ಮಾತನಾಡಿ, ತಾಲೂಕಿನ ಜನರು ಆರೋಗ್ಯದ ವಿಚಾರವಾಗಿ ಯಾವುದೇ ಸೌಲಭ್ಯಗಳಿಂದ ವಂಚಿತರಾಗಬಾರದು. ಪ್ಯಾರಮೆಡಿಕಲ್, ನರ್ಸಿಂಗ್ ವಿದ್ಯಾಭ್ಯಾಸ ಮಾಡಿದ ನಿರುದ್ಯೋಗಿಗಳು ತಾಲೂಕಿನಲ್ಲಿ ಹೆಚ್ಚಿದ್ದು ಅವರಿಗೆ ಉದ್ಯೋಗವಕಾಶ ಕಲ್ಪಿಸಿಕೊಡಲಾಗುವುದು ಹಾಗೂ ತಾಲೂಕು ಮಟ್ಟದಲ್ಲಿಯೇ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದರು.

ತಾಲ್ಲೂಕಿನ ಸಾರ್ವಜನಿಕರು ಗಂಭೀರ ಪರಿಸ್ಥಿಗಳಗಳಲ್ಲಿ ಮಾತ್ರ ಜಿಲ್ಲಾ ಮಟ್ಟದ ಅಥವಾ ಉನ್ನತ ಆಸ್ಪತ್ರೆಗೆ ರೋಗಿಗಳನ್ನು ಕಳುಹಿಸುವಂತಾಗಬೇಕು ಎಂದು ಹೇಳಿದರು.

ವಿವಿಧ ಕಾಮಗಾರಿಗಳಿಗೆ ಚಾಲನೆ: ಒಟ್ಟು 8 ಕೋಟಿ ಅನುದಾನದಲ್ಲಿ ಹೊಸಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ವಸತಿ ಗೃಹಗಳ ದುರಸ್ತಿ ಹಾಗೂ ನವೀಕರಣ ಕಾಮಗಾರಿ, ಹುಡೇಂ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ವಸತಿ ಗೃಹಗಳ ದುರಸ್ತಿ ಹಾಗೂ ನವೀಕರಣ ಕಾಮಗಾರಿ, ಕೂಡ್ಲಿಗಿ ಪಟ್ಟಣದ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ನೂತನ ಡಯಾಲಿಸಿಸ್ (ರಕ್ತಶುದ್ಧೀಕರಣ) ಯಂತ್ರ, ಅಮ್ಮನಕೇರಿ, ರಾಮದುರ್, ಸುಂಕದಕಲ್ಲು, ಹಾರಕನಾಳು, ಬಯಲು ತುಂಬರ, ಕಾಳಾಪುರ, ಸಿಡೇಗಲ್ಲು, ಜಮ್ಮುಬನಹಳ್ಳಿ(ಕುಮತಿ, ಆರೋಗ್ಯ ಉಪಕೇಂದ್ರಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿಗಳಿಗೆ ಇದೇ ವೇಳೆ ಸಚಿವರು ಚಾಲನೆ ನೀಡಿದರು.

ಆಸ್ಪತ್ರೆ ಸಿಬ್ಬಂದಿ ಜೊತೆ ಸಭೆ: ಸಚಿವರು ಆಸ್ಪತ್ರೆಯ ವೈದ್ಯರು ಹಾಗೂ ಸಿಬ್ಬಂದಿ ಜೊತೆ ಸಭೆ ನಡೆಸಿ ಅವರ ಅಹವಾಲುಗಳನ್ನು ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಲ್ ಶಂಕರ ನಾಯ್ಕ ಸೇರಿದಂತೆ ವಿವಿಧ ಅಧಿಕಾರಿಗಳು, ವೈದ್ಯರು ಮತ್ತು ಸಿಬ್ಬಂದಿ ಇದ್ದರು.

# 56 ವರ್ಷಗಳ ನಂತರ ಕೂಡಿ ಬಿದ್ದ ಕೆರೆಗೆ ಬಾಗಿನ ಅರ್ಪಿಸಿದ ಶಾಸಕ– ಡಾ. ಶ್ರೀನಿವಾಸ್. ಎನ್. ಟಿ

● ವಾರ್ತಾಲೋಕ ವಾರ್ತೆ



**ಕೂಡ್ಲಿಗಿ: ಅ 22.** ತಾಲೂಕಿನ ಅತ್ಯಂತ ಅಗಲಿರಳು ಬಿಡದೆ ಈ ಬಾರಿ ಧಾರಾಕಾರವಾಗಿ ಸುರಿಯುವ ಮಳೆಯಿಂದ ಕೆರೆಗಳ ತುಂಬಿ ಹರಿಯುತ್ತಿದ್ದು ಹಳ್ಳ ಕೊಳ್ಳಗಳು ಕೊಚ್ಚಿ ಹೋಗಿದ್ದು ಇದರ ಮಧ್ಯ ಮಾನ್ಯ ರಾತ್ರಿ ಸುರಿದ ಭಾರಿ ಮಳೆಯಿಂದ ಸುಮಾರು ವರ್ಷಗಳಿಂದ ಕೆರೆಗೆ ನೀರು ಬಾರದೆ ಕೆರೆ ತುಂಬದೇ ಪಾಳೇಗಾರರ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂಬ ಇತಿಹಾಸ ಇರುವ ಹುಲಿಕೇರಿ ಗ್ರಾಮದ ಕೆರೆ ತುಂಬಿ ಕೋಡಿಬಿದ್ದು ಹರಿಯುತ್ತಿರುವುದರಿಂದ ಇಡೀ ಗ್ರಾಮಸ್ಥರು ರೈತರು ಬಡವರು ಕೂಲಿ ಕಾರ್ಮಿಕರು ಸಂತೋಷದ ಸಂಭ್ರಮದಲ್ಲಿ ಕುಣಿದು ಕುಪ್ಪಳಿಸಿದ್ದಾರೆ ಆದ್ದರಿಂದ 56 ವರ್ಷಗಳ ನಂತರ ಕೋಡಿ ಬಿದ್ದ ಸಂತಸದಲ್ಲಿ ಮಾನ್ಯಶಾಸಕರಾದ ಡಾ. ಶ್ರೀನಿವಾಸ್. ಎನ್. ಟಿ. ಹಾಗೂ ಮುಖಂಡರು ಗ್ರಾಮಸ್ಥರು ಮಂಗಳವಾರ ಬೆಳಿಗ್ಗೆ ಕೆರೆಗೆ ಬಾಗಿನ ಅರ್ಪಿಸಿ ಗಂಗಾ ಪೂಜೆ ನೆರವೇರಿಸಿ ಕ್ಷೇತ್ರದ ಒಳಿತಿಗಾಗಿ ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಮಾಜಿ ಜಿ.ಪಂ.ಸದಸ್ಯರಾದ ಶಶಿಧರಸ್ವಾಮಿ, ಮಾಜಿ ತಾ. ಪಂ. ಸದಸ್ಯರಾದ ಶರಣಗೌಡ, ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಸೂಗಪ್ಪ, ಸಹಾಯಕ ಇಂಜಿನಿಯರ್ ರಾಜ್, ಶ್ರೀಕಾಂತ, ಹಿರೇಕುಂಬಳಕುಂಟೆ ಗ್ರಾ. ಪಂ. ಅಧ್ಯಕ್ಷರಾದ ಗಂಗಮ್ಮ ಕರಿಬಸಪ್ಪ, ಗ್ರಾ. ಪಂ. ಸದಸ್ಯರಾದ ದುರಗಪ್ಪ, ಮುಖಂಡರಾದ ಕೆಇಬಿ ಮಾರಪ್ಪ, ಡಾ. ಒಂಕಾರಪ್ಪ, ಹರೀಶ್, ಮಾರಪ್ಪ, ಚೆನ್ನಬಸಪ್ಪ, ಬಸವರಾಜ, ನವೀನ್, ಗಾಳೆಪ್ಪ, ಧನಂಜಯ್, ಶಿವಣ್ಣ, ಕುಬೇರಪ್ಪ ಮೇಷ್ಟ್ರು, ಗಾದ್ರೆಪ್ಪ, ಊರಿನ ಹಿರಿಯರು, ಗ್ರಾಮಸ್ಥರು, ರೈತರು, ಮಹಿಳೆಯರು ಇನ್ನೂ ಮುಂತಾದವರು ಉಪಸ್ಥಿತರಿದ್ದರು.

ವರದಿ ಎಚ್ ವೀರಣ್ಣ.

# ಅಧಿಕ ಮಳೆಯಿಂದ ವಿವಿಧೆಡೆ ನಷ್ಟ, ವೀಡಿಯೋ ಕಾನ್ಫರೆನ್ಸ್ ಮೂಲಕ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಭೆ

● ವಾರ್ತಾಲೋಕ ವಾರ್ತೆ



**ಹೊಸಪೇಟೆ : ಅ 22.** ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೆಳೆ ಹಾನಿ ಕುರಿತು ಮೊಬೈಲ್ ಆಧಾರಿತ ಸಮೀಕ್ಷಾ ಕಾರ್ಯ ಪೂರ್ಣಗೊಳಿಸಿ ನಿಗಧಿತ ಅವಧಿಯೊಳಗೆ ವರದಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಅವರು ತಿಳಿಸಿದರು.

ಮಳೆಯಿಂದಾದ ಹಾನಿಗೆ ಸಂಬಂಧಿಸಿದಂತೆ ಜಿಲ್ಲಾಡಳಿತ ಭವನದ ಕೆಸ್ವಾನ್‌ಹಾಲ್‌ನಲ್ಲಿ ಅಕ್ಟೋಬರ್ 21ರಂದು ನಡೆದ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯ ಹಲವು ಕಡೆ 60 ರಿಂದ 70 ಮಿ.ಮೀ ನಷ್ಟು ಮಳೆ ನಿರಂತರವಾಗಿ ಸುರಿಯುತ್ತಿದೆ. ಜಿಲ್ಲೆಯ ಒಟ್ಟು 16 ಹೊಬಳಿಯಲ್ಲಿ ನಿರಂತರವಾಗಿ ಮಳೆ ಸುರಿದು ಕೆರೆ, ಕಟ್ಟೆಗಳೆಲ್ಲಾ ತುಂಬಿವೆ. ಇನ್ನೂ ಒಂದು ವಾರ ಮಳೆ ಬರುವ ಸಂಭವವಿದ್ದು ಅಧಿಕಾರಿಗಳು ಮುಂಜಾಗ್ರತಾ ಕ್ರಮವನ್ನ ವಹಿಸಬೇಕಾಗುತ್ತದೆ ಎಂದರು. ಕೃಷಿ, ತೋಟಗಾರಿಕೆ ಮತ್ತು ಕಂದಾಯ ಇಲಾಖೆಯವರು ಜಂಟಿಯಾಗಿ ಆಯಾ ಭಾಗಗಳಿಗೆ ತಕ್ಷಣವೇ ಭೇಟಿ ನೀಡಿ ಹಾನಿಯಾದ ಬೆಳೆಗಳ ವರದಿ ತೆಗೆದುಕೊಂಡು ನಿಯಮಾನುಸಾರ ಕ್ರಮವಹಿಸಬೇಕು ಎಂದರು.

ಮೆಕ್ಕೆಜೋಳ ಕಟಾವಿಗೆ ಬಂದಿದೆ, ಇದು ನಿರಂತರ ಮಳೆಯಿಂದಾಗಿ ಹೊಲದ ತುಂಬೆಲ್ಲಾ ನೀರು ನಿಂತು ರೈತರು ಸಂಕಷ್ಟ ಎದುರಿಸುವ ಪರಿಸ್ಥಿತಿ ಬಂದಿದೆ. ಅದೇ ರೀತಿ ಕೆಲವು ಕಡೆ ಈರುಳ್ಳಿ ಬೆಳೆಯು ಮಳೆಗೆ ಸಿಲುಕಿದ್ದು ಕೃಷಿ ಇಲಾಖೆ ಅಧಿಕಾರಿಗಳು ಹೊಲಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸಿ ರೈತರಿಗೆ ಸಲಹೆ ನೀಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಈ ಹಿಂದೆ 267 ಮನೆಗಳು ಬಿದ್ದ ಬಗ್ಗೆ ವರದಿಯಾಗಿತ್ತು. ಬಾಕಿ ಮನೆಗಳಿಗೆ ಪರಿಹಾರ ಕೊಡಲು ಕ್ರಮವಹಿಸಬೇಕು. ದಾಖಲೆಗಳನ್ನು ಪರಿಶೀಲಿಸಿ ಬಿದ್ದ ಮನೆಗಳಿಗೆ ಪರಿಹಾರ ಧನ ದೊರಕಿಸಲಾಗಿದೆ ಎಂದು ಅಧಿಕಾರಿಗಳಿಗೆ, ಸಭೆಗೆ ಮಾಹಿತಿ ನೀಡಿದರು.

ಅಪರ ಜಿಲ್ಲಾಧಿಕಾರಿಗಳಾದ ಇ ಬಾಲಕೃಷ್ಣಪ್ಪ ಅವರು ಮಾತನಾಡಿ, ಮುಂಗಾರು ಹಂಗಾಮಿನಲ್ಲಿ ಉಂಟಾದ ಮಳೆ ಹಾನಿಯ ಹಿನ್ನೆಲೆಯಲ್ಲಿ ಸಿಬ್ಬಂದಿಗೆ ವಹಿಸಿದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಸೂಚಿಸಿದರು. ಜಿಲ್ಲೆಯ ಪ್ರತಿ ತಾಲೂಕಿನ ಮನೆಗಳಿಗೆ ಭೇಟಿ ನೀಡಿ ಕಂದಾಯ ಅಧಿಕಾರಿಗಳು ಮಾಹಿತಿ ಪಡೆದುಕೊಳ್ಳಬೇಕು ಎಂದರು.

ಸಭೆಯಲ್ಲಿ ಹೊಸಪೇಟೆ ತಾಲೂಕಿನ ತಹಶೀಲ್ದಾರರಾದ ಶೃತಿ ಎಂ.ಎಂ ಹಾಗೂ ಕಂದಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕೂಡ್ಲಿಗಿಯಲ್ಲಿ ನೋಂದಣಿ ಕಾರ್ಯ ಸ್ಥಗಿತ: ಸಾರ್ವಜನಿಕರು ಪರದಾಟ

● ವಾರ್ತಾಲೋಕ ವಾರ್ತೆ



**ಕೊಟ್ಟೂರು : ಅ22.** ಏಕಾಏಕಿ ನೋಂದಣಿ ಕಾರ್ಯ ಚಟುವಟಿಕೆಗಳನ್ನು ಸ್ಥಗಿತಗೊಳಿಸಿದ ಅಧಿಕಾರಿಗಳ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ಘಟನೆ ಕೂಡ್ಲಿಗಿ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಜರುಗಿದೆ. ಇಲ್ಲಿನ ನೋಂದಣಿ ಮತ್ತು ಮುದ್ರಾಂಕ ಕಚೇರಿಗೆ ಎಂದಿನಂತೆ ಸೋಮವಾರದಂದು ನಾಗರೀಕರು ತಮ್ಮ ಕೆಲಸಗಳಿಗಾಗಿ ಆಗಮಿಸಿದ್ದರು. ಆದರೆ 12 ಗಂಟೆಯ ನಂತರ ಏಕಾಏಕಿ ಮೂರು ದಿವಸ ಯಾವುದೇ ನೋಂದಣಿ ಕಾರ್ಯಗಳು ಮುಷ್ಕರದ ಹಿನ್ನೆಲೆ ಇರುವುದಿಲ್ಲ ಎಂದು ತಿಳಿಸಿದ ಕೂಡಲೇ ಸಾರ್ವಜನಿಕರು ಕಂಗಾಲಾಗಿ ಯಾವುದೇ ಸರ್ಕಾರಿ ಆದೇಶವಿಲ್ಲದೆ ನೀವು ಮುಷ್ಕರ ನಡೆಸಿದರೆ ನಮ್ಮ ಪಾಡೇನು ಎಂದು ಪ್ರಶ್ನಿಸಿದಾಗ ಯಾವುದೇ ಲಿಖಿತ ಉತ್ತರ ನೀಡದೇ ಇರುವುದು ಕಂಡುಬಂದಿತು.

ಸಾರ್ವಜನಿಕರು ಜನರ ಸಮಸ್ಯೆಗಳಿಗೆ ಪಟ್ಟು ಹಿಡಿದು ನಿಂತಾಗ ಉಪನೋಂದಣಾಧಿಕಾರಿ ವೈಶಾಲಿ ಯವರು ಪತ್ರಿಕೆಗೆ ಮಾಹಿತಿ ನೀಡಿ ಇತ್ತೀಚೆಗೆ ದಾಖಲಾತಿಗಳು ಫೋರ್ಜರಿ ಆಗುತ್ತಿರುವ ಹಿನ್ನೆಲೆ, ಹಾಗೂ ಇ. ಖಾತ ತಂತ್ರಾಂಶದಲ್ಲಿ ಬದಲಾವಣೆ ಮಾಡಬೇಕಾಗಿರುವುದರಿಂದ ಮತ್ತು ರಾಜ್ಯದ ಎಲ್ಲಾ ಉಪನೋಂದನಾಧಿಕಾರಿ ಕಚೇರಿ ಅಧಿಕಾರಿಗಳಿಗೆ ಯಾವುದೇ ಆಸ್ತಿಗಳು ನೋಂದಣಿಯಾದರು ಅಧಿಕಾರಿಗಳು ನೇರ ಹೊಣೆ ಎಂಬ ಆದೇಶದ ಹಿನ್ನೆಲೆಯಲ್ಲಿ ಎಲ್ಲಾ ಕಚೇರಿಗಳಲ್ಲಿ ಮುಷ್ಕರ ದ ನೋಟಿಸ್ ನೀಡಿದ್ದಾರೆ. ಎಂಬ ಉತ್ತರ ಸಿಕ್ಕಿತು. ಆದರೆ ಏಕಾಏಕಿ ಕಾರ್ಯ ಸ್ಥಗಿತಕ್ಕೆ ಜನರು ಪರದಾಡಬೇಕಾಯಿತು. ಬಂದ ಜನರು ಬಂದ ದಾರಿಗೆ ಸುಂಕವಿಲ್ಲ ಎಂದು ಹೊರಟರು ಸಾರ್ವಜನಿಕರಾದ ಆನಂದ,ಟಿ ಕೊಟ್ರೇಶ್,ಶ್ರೀನಿವಾಸ್, ಪತ್ರಿಕೆಗೆ ತಿಳಿಸಿದರು

> ಕೂಡ್ಲಿಗಿ ಉಪನೊಂದಣಾದಿಕಾರಿ ಕಾರ್ಯಾಲಯದಲ್ಲಿ ನೋಂದಣಿ ಕಾರ್ಯ ಸ್ಥಗಿತ ಗೊಂಡಿರುವುದು ಸಂಬಂದ ಪಟ್ಟ ಅಧಿಕಾರಿಗಳಿಗೆ ಪ್ರಶ್ನೆ ಮಾಡಿದರೆ ಕ್ಯಾರೇ ಅನ್ನದೆ ಬೆಳಗಿನಿಂದಲೇ ರಿಜಿಸ್ಟ್ರೇಷನ್ ಗೆ ಬಂದು ಜನ ಕಾಯುತ್ತಿದ್ದಾರೆ ಸರಿಯಾದ ಮಾಹಿತಿ ಕೊಡದೆ ಜನಗಳು ಅಲೆದಾಡುವ ಸ್ಥಿತಿ ಕಂಡು ಬಂದಿತು ಎಂದು ಅಖಿಲ ಭಾರತ ದಲಿತ ಹಕ್ಕುಗಳ ಆಂದೋಲನ ಕೊಟ್ಟೂರು ತಾಲೂಕು ಸಮಿತಿ ಕಾರ್ಯದರ್ಶಿ ಅಂಜಿನಿ ಹೇಳುತ್ತಿದ್ದಾರೆ.
> ವರದಿ ಪರಶುರಾಮ್.

# ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ ರವರನ್ನು ಕಚೇರಿಯಲ್ಲಿ ಭೇಟಿ

● ವಾರ್ತಾಲೋಕ ವಾರ್ತೆ



**ಹೊಸಪೇಟೆ:** ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಖಾಸಗಿ ಭೂಮಾಲೀಕರ ಸಹಭಾಗಿತ್ವದಲ್ಲಿ 50:50 ಅನುಪಾತದಲ್ಲಿ ವಸತಿ ಯೋಜನೆ ನಿರ್ಮಿಸಲು ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ನಿವೇಶನ ನೀಡುವ ಸುವರ್ಣ ಯೋಜನೆಯನ್ನು ನಗರಾಭಿವೃದ್ಧಿ ಪ್ರಾಧಿಕಾರವು ಹಮ್ಮಿಕೊಂಡಿದ್ದು, ಸದರಿ ಯೋಜನೆಗೆ ಆಸಕ್ತಿ ತೋರಿಸಿ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಹಾಗೂ ನಂದಿ ಬಂಡಿ ಗ್ರಾಮದ ಹಲವು ರೈತರು ಇಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ ರವರನ್ನು ಕಚೇರಿಯಲ್ಲಿ ಭೇಟಿ ಮಾಡಿ ಯೋಜನೆಯ ಸಾಧಕ ಭಾದಕಗಳನ್ನು ಕುರಿತು ಚರ್ಚಿಸಿ ಸಾರ್ವಜನಿಕರಿಗೆ ಅನೂಕೂಲಕರವಾದ 50:50 ಅನುಪಾತದ ಸಹಭಾಗಿತ್ವದ ವಸತಿ ಯೋಜನೆಗೆ ಸ್ವಯಂ ಪ್ರೇರಿತವಾಗಿ ಒಪ್ಪಿ ಒಪ್ಪಿಗೆ ಪತ್ರದ ಮೂಲಕ ಯೋಜನೆಗೆ ಸುಮಾರು 25 ಎಕರೆಗೂ ಅಧಿಕ ಜಮೀನುಗಳನ್ನು ನೀಡುವುದಾಗಿ ಮನವಿ ಪತ್ರಗಳನ್ನು ರೈತರು ಸಲ್ಲಿಸಿದರು.

ಇದೇ ವೇಳೆ ಮಾತನಾಡಿದ ಅಧ್ಯಕ್ಷರು ಇಂದು ವಸತಿ ಯೋಜನೆ ಅಭಿವೃದ್ಧಿ ಪಡಿಸಲು ಸುಮಾರು ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತಿದ್ದು, ಪ್ರಾಧಿಕಾರ ಮತ್ತು ರೈತರ ಸಹಭಾಗಿತ್ವದ 50:50 ಅನುಪಾತದ ಉತ್ತಮ ವಸತಿ ಯೋಜನೆಗೆ ರೈತರು ಮುಂದೆ ಬಂದು ಜಮೀನುಗಳನ್ನು ನೀಡಿದರೆ ಪ್ರಾದಿಕಾರವು ಉತ್ತಮ ವಸತಿ ಯೋಜನೆ ನಿರ್ಮಿಸಿ ರೈತರಿಗೂ ಮತ್ತು ಸಾರ್ವಜನಿಕರಿಗೆ ಉತ್ತಮ ಸೌಲಭ್ಯವುಳ್ಳ ನಿವೇಶನದ ಸೌಲಭ್ಯ ಕಲ್ಪಿಸಲಾಗುವುದು ಹಾಗಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ರೈತರು ಈ ವಸತಿ ಯೋಜನೆಗೆ ಜಮೀನು ನೀಡುವ ಕುರಿತು ಪ್ರಾಧಿಕಾರದ ಕಛೇರಿಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಹೇಳಿದರು.

# ಪೆಟಾಲೂರು ಗ್ರಾಮದಲ್ಲಿ ಗಾಂಜಾ ವಶ

● ವಾರ್ತಾಲೋಕ ವಾರ್ತೆ



**ಮುಂಡರಗಿ :** ಅ 22. ದಿನಾಂಕ 22–10–2024 ರಂದು ಮಾನ್ಯ ಅಬಕಾರಿ ಉಪ ಆಯುಕ್ತರು ಗದಗ್ ಜಿಲ್ಲೆ, ಗದಗ್ ರವರ ಮಾರ್ಗದರ್ಶನದಲ್ಲಿ ನಾನು ವಲಯ ಸಿಬ್ಬಂದಿಯೊಂದಿಗೆ ಮುಂಡರಗಿ ಶಹರದಲ್ಲಿ ಗಸ್ತು ಮಾಡುತ್ತಿರುವಾಗ ಬಂದಂತಹ ಮಾಹಿತಿ ಮೇರೆಗೆ ಮಾನ್ಯ ಅಬಕಾರಿ ಉಪ– ಅಧೀಕ್ಷಕರು ಉಪ ವಿಭಾಗ ಗದಗ್ ರವರ ನೇತೃತ್ವದಲ್ಲಿ ನಾನು ವಲಯ ಸಿಬ್ಬಂದಿ ಹಾಗೂ ಪಂಚರೊಂದಿಗೆ ಸೇರಿಕೊಂಡು ಬೆಳಗ್ಗೆ 10 ಗಂಟೆ 40 ನಿಮಿಷ ಸಮಯದಲ್ಲಿ ಮುಂಡರಗಿ ತಾಲೂಕಿನ ಪೇಠಾಲೂರು ಗ್ರಾಮದ ನಿವಾಸಿಯಾದ ಕಟ್ಟೆಪ್ಪ ತಂದೆ ಜಾಲಪ್ಪ ಹರಣಶಿಕಾರಿ ಈತನ ವಾಸದ ಮನೆಯ ಮೇಲೆ ದಾಳಿ ಮಾಡಿದಾಗ ಸದರಿ ಮನೆಯಲ್ಲಿ ಮಾರಾಟ ಮಾಡುವ ಉದ್ದೇಶಕ್ಕಾಗಿ ಎಲೆ ತೆನೆ, ಬೀಜಗಳಿಂದ ಕೂಡಿದ ಒಣ ಗಾಂಜಾ ತುಂಬಿದ ಸಣ್ಣ ಸಣ್ಣ ಪ್ರಮಾಣದ 28 ಪ್ಲಾಸ್ಟಿಕ್ ಪೌಚ್ ಗಳು ಅವುಗಳ ಒಟ್ಟು ತೂಕ 158 ಗ್ರಾಂ ಒಣಗಾಂಜಾವನ್ನು ಸಂಗ್ರಹ ಮಾಡಿಟ್ಟಿರುವುದುಸಿಕ್ಕಿದ್ದು,ಇದರ ಅಂದಾಜು ಮೌಲ್ಯ5000/–ರೂ ಗಳು ಇರುತ್ತದೆ. ಇದು ಎನ್. ಡಿ.ಪಿ ಎಸ್. ಕಾಯ್ದೆ 1985ರ 8(ಬಿ) ರ ಉಲ್ಲಂಘನೆಯಾಗಿದ್ದು , ಹಾಗೂ ಇದೇ ಸಹವಾಚಿತ ಕಾಯ್ದೆಯ 20(b)(¡¡)(೦)ಮತ್ತು 25 ರನ್ವಯ ಶಿಕ್ಷಾರ್ಹ ಅಪರಾಧವಾಗಿದ್ದರಿಂದ ಈ ಕುರಿತಂತೆ ಆರೋಪಿತನಾದ ಎ 1)ಕಟ್ಟೆಪ್ಪ ತಂದೆ ಜಾಲಪ್ಪ ಹರಣ ಶಿಕಾರಿ ವಯಸ್ಸು 28 ಜಾತಿ ಹಿಂದು ಹರಣ ಶಿಕಾರಿ ಗ್ರಾಮ ತಾಲೂಕ್ ಮುಂಡರಗಿ ಜಿಲ್ಲಾ ಗದಗ್ ಈತನನ್ನು ದಸ್ತಗಿರಿ ಗೊಳಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ ಹಾಗೂ ಎ 2) ಮನೆ ಮಾಲೀಕನನ್ನು ಪತ್ತೆ ಹಚ್ಚಬೇಕಾಗಿದೆ. ಸದರಿ ಸ್ಥಳದಲ್ಲಿ ಸಿಕ್ಕ ಒಣ ಗಾಂಜಾವನ್ನು ಪಂಚನಾಮೆ ಅಡಿಯಲ್ಲಿ ಜಪ್ತುಪಡಿಸಿಕೊಂಡು ಸದರಿ ಆರೋಪಿತನ ವಿರುದ್ಧ ಸರ್ಕಾರಿ ತರ್ಫೆ ಸ್ವ ಫಿರ್ಯಾದಿ ಸಲ್ಲಿಸಿ, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಮಾನ್ಯ ಪ್ರಥಮ ದರ್ಜೆ ನ್ಯಾಯಾಧೀಶರು ಜೆ. ಎಮ್.ಎಫ್.ಸಿ. ನ್ಯಾಯಾಲಯ ಮುಂಡರಗಿ ರವರಲ್ಲಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ವರದಿ ಬಸವರಾಜ್.

# ಡಾ.ಡಿ.ವಿ. ಪರಮಶಿವಮೂರ್ತಿಯವರಿಗೆ ಪ್ರತಿಷ್ಠಿತ ಸೋದೆ ಸದಾಶಿವರಾಯ ಪ್ರಶಸ್ತಿ

● ವಾರ್ತಾಲೋಕ ವಾರ್ತೆ



**ಹೊಸಪೇಟೆ : ಅ 22.** ಪುರಾತತ್ವ ವಸ್ತು ಸಂಗ್ರಹಾಲಯಗಳು ಪರಂಪರೆ ಇಲಾಖೆ, ಮೈಸೂರು, ಸೋದೆ ಸದಾಶಿವರಾಯ ಪ್ರಶಸ್ತಿ ಪ್ರದಾನ ಸಮಿತಿ ಸಹಯೋಗದಲ್ಲಿ ನಡೆದ 7ನೇ ವರ್ಷದ ಸೋಂದಾ ಇತಿಹಾಸೋತ್ಸವದಲ್ಲಿ 'ಪ್ರತಿಷ್ಠಿತ ಸೋದೆ ಸದಾಶಿವರಾಯ ಪ್ರಶಸ್ತಿ'ಯನ್ನು ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಕುಲಪತಿಗಳಾದ ಡಾ.ಡಿ.ವಿ.ಪರಮಶಿವಮೂರ್ತಿ ಅವರಿಗೆ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಸೋಂದಾ, ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನ ಹಾಗೂ ಜಗದ್ಗುರು ಅಕಲಂಕ ಕೇಸರಿ ಸ್ವಸ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿಗಳು ನೀಡಿ ಗೌರವಿಸಿದರು.

ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಪ್ರೊ.ಡಿ.ವಿ.ಪರಮಶಿವಮೂರ್ತಿ ಅವರು "ಸೋದೆ ಅರಸುಮನೆತನದ ಅತ್ಯಂತ ಪ್ರಸಿದ್ಧ ಅರಸ ಸೋದೆ ಸದಾಶಿವರಾಯರು ಈ ಮನೆತನದ ಕೀರ್ತಿಯನ್ನು ದಶದಿಕ್ಕುಗಳಿಗೆ ಪಸರಿಸಿದವರು. ಸ್ವತಃ ಪಂಡಿತರಾಗಿದ್ದ ಇವರು ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿ ಸಾಹಿತ್ಯ ಕ್ಷೇತ್ರವನ್ನು ಬೆಳಗಿಸಿದವರು. ಇವರ ಪ್ರಕಟಿತ ಕೃತಿಗಳು ಮರು ಮುದ್ರಣವಾಗಬೇಕು ಹಾಗೂ ಅಪ್ರಕಟ ಕೃತಿಗಳನ್ನು ಪತ್ತೆಹಚ್ಚಿ ಪ್ರಕಟಿಸುವ ಕೆಲಸವಾಗಬೇಕು. ಇವರ ಸಾಧನೆಗಳ ಕುರಿತು ಸಂಶೋಧನೆಗಳಾಬೇಕು. ಇಂದಿನ ಯುವಕರಿಗೆ ಇಂಥ ಅರಸರ ಆದರ್ಶಗಳು ಮಾದರಿಯಾಗಬೇಕು. ಇಂಥವರ ಚರಿತ್ರೆಯನ್ನು ಯುವಕರಿಗೆ ತಲುಪಿಸುವ ಕೆಲಸವಾಗಬೇಕು. ಇತಿಹಾಸದಿಂದ ಕಲಿಯುವ ನೈತಿಕ ಪಾಠಗಳು ಅನೇಕ ಇವೆ. ಅವುಗಳನ್ನು ಇಂದಿನ ಮಕ್ಕಳಿಗೆ, ಯುವಕರಿಗೆ, ಸಮಾಜಕ್ಕೆ ತಲುಪಿಸುವ ಕೆಲಸವಾಗಬೇಕು" ಎಂದು ಕರೆ ನೀಡಿದರು.

ವರದಿ ಎ ಚಿದಾನಂದ.

# ಕ್ರೀಡಾ ಚಟುವಟಿಕೆಯಿಂದ ದೈಹಿಕ, ಮಾನಸಿಕ ಸದೃಢತೆ : ಪ್ರೊ.ಮುನಿರಾಜು

● ವಾರ್ತಾಲೋಕ ವಾರ್ತೆ






**ಬಳ್ಳಾರಿ,ಅ.22 :** ದೈಹಿಕ ಮತ್ತು ಮಾನಸಿಕ ಮನೋಲ್ಲಾಸಕ್ಕೆ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಂ ಮುನಿರಾಜು ಅಭಿಪ್ರಾಯ ಪಟ್ಟರು.

ಅವರು ಇಲ್ಲಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕ್ರೀಡಾ ವಿಭಾಗದ ವತಿಯಿಂದ ಆಯೋಜಿಸಿರುವ ಎರಡು ದಿನಗಳ ಅಂತರ್ ಮಹಾವಿದ್ಯಾಲಯ ಪುರುಷರ ಕಬಡ್ಡಿ ಪಂದ್ಯಾವಳಿಗಳಿಗೆ ಚಾಲನೆ ನೀಡಿ ಮಾತನಾಡಿ, ಶ್ರದ್ಧೆಯಿಂದ ಕ್ರೀಡೆಗಳನ್ನು ಕಲಿತುಕೊಂಡು ಆಡಬೇಕು. ಇದರಿಂದ ಆರೋಗ್ಯವೂ ವೃದ್ಧಿಸುತ್ತದೆ. ಕ್ರೀಡಾಪಟುಗಳಲ್ಲಿ ಸ್ಪರ್ಧಾ ಮನೋಭಾವ ಇರಬೇಕು. ಜೀವನದಲ್ಲಿ ಶಿಸ್ತು ಕಲಿಸಿಕೊಟ್ಟ ಶಾಲಾ ಮಟ್ಟದ ದೈಹಿಕ ಶಿಕ್ಷಕರಿಗೆ ಇದೇ ಸಂದರ್ಭದಲ್ಲಿ ಮನನ ಮಾಡಿಕೊಂಡರು.

ಕುಲಸಚಿವರಾದ ಎಸ್.ಎನ್. ರುದ್ರೇಶ್ ಅವರು ಮಾತನಾಡಿ, ಕ್ರೀಡೆಗಳಿಂದ ಮಾನಸಿಕ ಒತ್ತಡವನ್ನು ನಿಭಾಯಿಸಬಹುದು. ಕ್ರೀಡೆ ಮತ್ತು ಸಂಸ್ಕೃತಿಯನ್ನು ಅನುಭವಿಸುವುದರ ಜೊತೆಗೆ ಆಸ್ವಾದಿಸಬೇಕು. ದೇಸಿ ಕಲೆಗಳಿಗೆ ಪ್ರೋತ್ಸಾಹಿಸುವುದು ನಮ್ಮೆಲ್ಲರ ಹೊಣೆ ಎಂದರು. ಕ್ರೀಡಾಂಗಣ ನಿರ್ಮಾಣ ಮತ್ತು ಕ್ರೀಡಾ ವಿಭಾಗಕ್ಕೆ ಪ್ರತ್ಯೇಕ ಕಟ್ಟಡಕ್ಕೆ ಈ ಬಾರಿಯ ಬಜೆಟ್‌ನಲ್ಲಿ ಹಣ ಮೀಸಲಿಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ನಿವೃತ್ತ ದೈಹಿಕ ಶಿಕ್ಷಣ ನಿರ್ದೇಶಕ ಚಂದ್ರಶೇಖರಗೌಡ ಅವರು ಮಾತನಾಡಿ, ದೈಹಿಕ ಸದೃಢತೆ ಕಾಪಾಡಿಕೊಳ್ಳುವುದು ಪ್ರತಿ ಕ್ರೀಡಾಪಟುವಿನ ಮೊದಲ ಆದ್ಯತೆ ಆಗಬೇಕು. ಮುಂಬರುವ ಓಲಿಂಪಿಕ್ಸ್ ಕ್ರೀಡೆಗಳಲ್ಲಿ ಕಬಡ್ಡಿ ಮತ್ತು ಖೋ–ಖೋ ಕ್ರೀಡೆಗಳನ್ನು ಆರಂಭಿಸಲು ಸರ್ಕಾರಕ್ಕೆ ಮನವಿ ಪತ್ರ ನೀಡಲಾಗಿದೆ ಎಂದರು.

ಕ್ರೀಡಾ ವಿಭಾಗದ ನಿರ್ದೇಶಕ ಡಾ.ಶಶಿಧರ್ ಕೆಲ್ಲೂರ್, ಸಹಾಯಕ ಪ್ರಾಧ್ಯಾಪಕ ಡಾ.ಸಂಪತ್ ಕುಮಾರ್ ವೇದಿಕೆಯಲ್ಲಿದ್ದರು.

ವಿಶ್ವವಿದ್ಯಾಲಯದ ಅಧೀನದ 15 ವಿವಿಧ ಮಹಾವಿದ್ಯಾಲಯಗಳ ದೈಹಿಕ ಶಿಕ್ಷಣ ಸಂಯೋಜಕರುಗಳು, ಪ್ರಾಧ್ಯಾಪಕರುಗಳು ಸೇರಿದಂತೆ 150ಕ್ಕೂ ಹೆಚ್ಚು ಸ್ಪರ್ಧಾಳುಗಳು ಈ ಕಬ್ಬಡ್ಡಿ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದರು.

# ಅಂಗಡಿಮುಂಗಟ್ಟುಗಳ ನಾಮಫಲಕದಲ್ಲಿ ಪರಭಾಷೆ ಬೇಡ, ಕನ್ನಡಭಾಷೆ ಬಳಸಿರಿ ಕರವೇ ಕುರುಗೋಡು ತಾಲೂಕು ಘಟಕದಿಂದ ಮುಖ್ಯಾಧಿಕಾರಿಗೆ ಮನವಿ

● ವಾರ್ತಾಲೋಕ ವಾರ್ತೆ




**ಕುರುಗೋಡು.ಅ.22** ಸ್ಥಳೀಯ ಪಟ್ಟಣದ ಅಂಗಡಿ–ಮುಂಗಟ್ಟುಗಳು, ವಾಣಿಜ್ಯಸಂಕೀರ್ಣಗಳು ಸೇರಿದಂತೆ ಇತರೆಡೆಗಳಲ್ಲಿ ಸರ್ಕಾರದ ಆದೇಶದಂತೆ ಶೇ.65 ರಷ್ಟು ಕನ್ನಡನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ನೋಡಿಕೊಳ್ಳಬೇಕೆಂದು ಕುರುಗೋಡು ಪುರಸಭೆ ಮುಖ್ಯಾಧಿಕಾರಿ ಹರ್ಷವರ್ಧನರೆಡ್ಡಿಯವರಿಗೆ ಕರ್ನಾಟಕ ರಕ್ಷಣಾವೇದಿಕೆ [ಗೌಡಬಣ] ಕುರುಗೋಡು ತಾಲೂಕು ಘಟಕದಿಂದ ಮನವಿಸಲ್ಲಿಸಿದರು.

ಮನವಿಯಲ್ಲಿ ಕರವೇ ಕುರುಗೋಡು ತಾಲೂಕು ಘಟಕದ ಅಧ್ಯಕ್ಷ ಗೆಣಿಕೆಹಾಳುವೀರೇಶ ಅವರು ಮಾತನಾಡಿ, ರಾಜ್ಯದಲ್ಲಿ ಪರಭಾಷೆ ಬಳಸುವುದು ಹೆಚ್ಚಾಗಿದ್ದು, ಇದಕ್ಕೆ ಕಡಿವಾಣ ಹಾಕಲು ರಾಜ್ಯಸರ್ಕಾರವು ಶೇ.65 ರಷ್ಟು ಕನ್ನಡ ನಾಮಫಲಕಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಸೂಚನೆ ನೀಡಲಾಗಿದೆ ಎಂದು ನುಡಿದರು. ಆದ್ದರಿಂದ ಎಲ್ಲಾ ಸರ್ಕಾರಿ ಮತ್ತು ಅನುದಾನ, ಅನುದಾನರಹಿತ ಶಾಲಾ–ಕಾಲೇಜುಗಳು, ವಾಣಿಜ್ಯಸಂಕೀರ್ಣಗಳು, ಕೈಗಾರಿಕೆ ಮತ್ತು ಅಂಗಡಿಮುಂಗಟ್ಟುಗಳವ್ಯವಹಾರ, ಉದ್ಯಮಗಳು, ಟ್ರಸ್ಟ್‌ಗಳು, ಆಸ್ಪತ್ರೆಗಳು, ಪ್ರಯೋಗಾಲಯಗಳು, ಮನೋರಂಜನಾಕೇಂದ್ರಗಳು, ಹೋಟೆಲ್‌ಗಳು, ಬಾರ್‌ರೆಸ್ಟೋರೆಂಟ್‌ಗಳು ಸೇರಿದಂತೆ ಇತರೆಡೆಗಳಲ್ಲಿ ಕನ್ನಡಭಾಷೆಯ ನಾಮಫಲಕಗಳನ್ನು ಪ್ರದರ್ಶಿಸುವುದು ಕಡ್ಡಾಯವಾಗಿದೆ ಇದನ್ನು ಉಲ್ಲಂಘನೆ ಮಾಡಿದರೆ ಅಂಥಹ ಅಂಗಡಿಮಾಲಿಕರ ವಿರುದ್ಧ ಕರ್ನಾಟಕ ರಕ್ಷಣಾವೇದಿಕೆ ಕುರುಗೋಡು ತಾಲೂಕು ಘಟಕದ ಕಾರ್ಯಕರ್ತರಿಂದ ಬೀದಿಗಿಳಿದು ಹೋರಾಟ ಮಾಡಿ ಅನ್ಯಭಾಷೆನಾಮಫಲಕವನ್ನು ತೆರವುಗೊಳಿಸಬೇಕಾಗುತ್ತಿದೆ ಎಂದು ಕುರುಗೋಡು ಪುರಸಭೆ ಮುಖ್ಯಾಧಿಕಾರಿ ಹರ್ಷವರ್ಧ ನರೆಡ್ಡಿಯವರಿಗೆ ಮನವಿಸಲ್ಲಿಸಿದರು.

ಮನವಿಸ್ವೀಕರಿಸಿ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಹರ್ಷವರ್ಧನರೆಡ್ಡಿಯವರು ಕೂಡಲೇ ತಮ್ಮ ಬೇಡಿಕೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು.

ಮನವಿಯಲ್ಲಿ ಕರವೇ ಕುರುಗೋಡುನಗರ ಘಟಕ ಅಧ್ಯಕ್ಷ ಕೆ.ಶಿವುಕುಮಾರ್, ಗೌರವಾಧ್ಯಕ್ಷ ಚನ್ನಬಸವನಗೌಡ, ಉಪಾಧ್ಯಕ್ಷನೆವಾರ್‌ರಾಜಶೇಖರ್, ಮಂಜುನಾಥ್, ಶ್ರೀಕಾಂತ್, ಮಾರುತಿ, ವೆಂಕಟೇಶ್ ಸೇರಿದಂತೆ ಇತರೆ ಕುರುಗೋಡು ತಾಲೂಕು ಘಟಕದ ಕಾರ್ಯಕರ್ತರು ಇದ್ದರು.

# ಮಹರ್ಷಿ ಜಯಂತಿಯಲ್ಲಿ ಜಾತಿ ಗದ್ದಲ

**ಮುಧೋಳ :** ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆಯಲ್ಲಿ ಗಣ್ಯರೊಬ್ಬರು ವೇದಿಕೆ ಏರಿದಾಗ ಅಲ್ಲಿ ನೆರೆದಿದ್ದ ಜನರ ಆಕ್ರೋಶಕ್ಕೆ ಕಾರಣವಾಗಿ ಕೆಲ ಹೊತ್ತು ಗೊಂದಲ ಮೂಡಿತು.



ತಾಲೂಕು ಆಡಳಿತ, ತಾಲೂಕು ಪಂಚಾಯಿತಿ, ಸಮಾಜ ಕಲ್ಯಾಣ ಇಲಾಖೆ ಹಾಗೂ ನಗರಸಭೆ ಸಂಯುಕ್ತ ಆಶ್ರಯದಲ್ಲಿ ಡಾ.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಮ್ ಭವನದಲ್ಲಿ ಹಮ್ಮಿಕೊಂಡಿದ್ದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಉದ್ಘಾಟನೆ ನಂತರ ಉಪನ್ಯಾಸ ನೀಡಲು ಸಿದ್ಧತೆ ನಡೆದಾಗ ಚಿನ್ನಪ್ಪ ಅಂಬಿ ವೇದಿಕೆ ಮೇಲೆ ಏರಿದಾಗ ವಿವಾದ ಕಿಡಿ ಹೊತ್ತಿತು.

ತಳವಾರ ಸಮುದಾಯಕ್ಕೆ ಎಸ್‌ಟಿ ಸ್ಥಾನಮಾನಕ್ಕಾಗಿ ಪ್ರತಿಪಾದಿಸುವ ಮುಖಂಡ ಚಿನ್ನಪ್ಪ ಅಂಬಿ ಅವರನ್ನು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೋಹನ ಕೋರಡ್ಡಿ ವೇದಿಕೆಗೆ ಆಹ್ವಾನಿಸಿದ್ದು ವಾಲ್ಮೀಕಿ ಸಮುದಾಯ ದವರ ಆಕ್ರೋಶಕ್ಕೆ ಕಾರಣವಾಯಿತು.

ತಳವಾರ ಸಮುದಾಯಕ್ಕೆ ಎಸ್‌ಟಿ ಸ್ಥಾನಮಾನ ದೊರಕಿಸಿಕೊಡಲು ಚಿನ್ನಪ್ಪ ಅಂಬಿ ನಡೆಸಿದ ಪ್ರಯತ್ನವನ್ನು ವಾಲ್ಮೀಕಿ ಸಮುದಾಯ ಗಮನಿಸುತ್ತಿದೆ. ತಮ್ಮ ಸಮುದಾಯದ ವಿರುದ್ಧ ಹೋರಾಡುವವರನ್ನು ವೇದಿಕೆ ಹಂಚಿಕೊಳ್ಳಲು ಏಕೆ ಆಹ್ವಾನಿಸಿದೀರಿ ಎಂದು ತಹಸೀಲ್ದಾರ್ ಮಹದೇವ ಸನಮುರಿ ಅವರನ್ನು ಪ್ರಶ್ನಿಸಿದರು.

ಪರಿಸ್ಥಿತಿ ಹದಗೆಡುವ ಮುನ್ನವೇ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೋಹನ ಕೋರಡ್ಡಿ ಕ್ಷಮೆಯಾಚಿಸಿದರು. ಅಂಬಿ ಅವರನ್ನು ವೇದಿಕೆಯಿಂದ ನಿರ್ಗಮಿಸಲು ಹೇಳಿದಾಗ ಗದ್ದಲ ನಿಯಂತ್ರಣಕ್ಕೆ ಬಂದಿತು.

ನಂತರ ಕಾರ್ಯಕ್ರಮ ಯಥಾವತ್ತಾಗಿ ಜರುಗಿತು. ನಗರಸಭೆ ಅಧ್ಯಕ್ಷ ಸುನಂದಾ ತೇಲಿ ಉದ್ಘಾಟನೆ ನೆರವೇ- ರಿಸಿದರು. ಯಡಹಳ್ಳಿಯ ಚಂದ್ರಶೇಖರ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು.

ಲೋಕಾಪುರ ಪ್ರೌಢಶಾಲೆಯ ಎಚ್.ಎಫ್ .ನಾಯಕ ಉಪನ್ಯಾಸ ನೀಡಿದರು. ಶಂಕರ ತಿಮ್ಮಾಪುರ, ಬೆಳಗಲಿ ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರೂಪಾ ಹೊಸಹಳ್ಳಿ, ಉಪಾಧ್ಯಕ್ಷೆ ಸಹನಾ ಸಾಂಗ್ಲಿಕರ, ನಗರಸಭೆ ಉಪಾಧ್ಯಕ್ಷ ಮಹಿಬೂಬ ಬಾಗವಾನ, ವಾಲ್ಮೀಕಿ ಮಹಾಸಭಾ ಅಧ್ಯಕ್ಷ ಭೀಮಪ್ಪ ತಳವಾರ, ಚನ್ನಬಸು ಮತ್ತೂರು, ತಾಲೂಕು ಪಂಚಾಯಿತಿ ಇಒ ಉಮೇಶ ಸಿದ್ನಾಳ, ಸಿಪಿಐ ಮಹದೇವ ಶಿರಹಟ್ಟಿ, ನಗರಸಭೆ ಸಿಒ ಗೋಪಾಲ ಕಾಸೆ ಇದ್ದರು.

ಕಾರ್ಯಕ್ರಮಕ್ಕೂ ಮುನ್ನ ಜಡಗಣ್ಣ ಬಾಲಣ್ಣ ವೃತ್ತದಿಂದ ಪ್ರಾರಂಭವಾದ ಮಹರ್ಷಿ ವಾಲ್ಮೀಕಿ ಭಾವಚಿತ್ರ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಡಾ.ಬಿ.ಆರ್. ಅಂಬೇಡ್ಕರ್ ಭವನ ತಲುಪಿತು.

# ಮನುಕುಲಕ್ಕೆ ಬದುಕಿನ ಮೌಲ್ಯ ಕಲ್ಪಿಸಿದ ಮಹಾತ್ಮ

**ಬೀಳಗಿ:** ಮಹಾಕಾವ್ಯ ರಾಮಾಯಣ ಗ್ರಂಥ ರಚಿಸಿ ಮನುಕುಲಕ್ಕೆ ಬದುಕಿನ ಮೌಲ್ಯಗಳನ್ನು ತಿಳಿಸಿಕೊಟ್ಟ ಮಹಾನ್ ಕವಿ ಮಹರ್ಷಿ ವಾಲ್ಮೀಕಿ ಎಂದು ವಿಧಾನಪ- ರಿಷತ್ ಶಾಸಕ ಹಣಮಂತ ಆರ್.ನಿರಾಣಿ ಹೇಳಿದರು.



ಸ್ಥಳೀಯ ತಹಸೀಲ್ದಾರ್ ಕಚೇರಿ ಆವರಣದಲ್ಲಿ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಗುರುವಾರ ನಡೆದ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹರ್ಷಿ ವಾಲ್ಮೀಕಿಯವರು ಇವತ್ತಿಗೂ ನಮ್ಮ ಕಣ್ಣುಮುಂದೆ ನಿಲ್ಲುತ್ತಾರೆ. ಐದು ಸಾವಿರ ವರ್ಷಗಳ ಹಿಂದೆ ಆದ ಇತಿ- ಹಾಸ ನಮ್ಮ ಭಾರತದ ಸಂಸ್ಕೃತಿ, ಪರಂಪರೆ ಎಲ್ಲಿ ಸಿಗುತ್ತದೆವೆ ಎಂದರೆ ರಾಮಾಯಣ ಎಂಬ ಶ್ರೇಷ್ಠ ಗಂಥದಲ್ಲಿ ಎಂದರಲ್ಲದೆ, ಸಮಾಜಬಾಂಧವರು ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡಬೇಕು. ಸರ್ಕಾರದ ಸೌಲಭ್ಯ ಪಡೆದು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ರಂಗದಲ್ಲಿ ಮುಂದೆ ಬರಬೇಕಾದರೆ ಶಿಕ್ಷಣದ ಅರಿವು ಅತಿ ಮುಖ್ಯವಾಗಿದೆ ಎಂದರು.

ಬೆಳಗಾವಿ ವಿಭಾಗೀಯ ಕರ್ನಾಟಕ ರಾಜ್ಯ ದಲಿತ ಸಮಿತಿ ಅಧ್ಯಕ್ಷ ಮಹಾದೇವ ಹಾದಿಮನಿ ಉಪನ್ಯಾಸ ನೀಡಿ, ಮಹರ್ಷಿ ವಾಲ್ಮೀಕಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ವಿಚಾರಗಳನ್ನು ನಮ್ಮ ಜೀವನದ ಬದುಕಿನುದ್ದಕ್ಕೂ ಅ ಳ ವ ಡಿ ಸಿ ಕೊ ೦ ಡು ಮುನ್ನಡೆಯಬೇಕಿದೆ ಎಂದರು.

ಜಯಂತ್ಯುತ್ಸವ ಸಮಿತಿ ಅಧ್ಯಕ್ಷ ತಹಸೀಲ್ದಾರ್ ವಿನೋದ ಹತ್ತಳ್ಳಿ, ತಾಪಂ ಇಒ ಅಭಯಕುಮಾರ ಮೊರಬ, ಬಿಇಒ ಎಸ್.ಆರ್. ಆದಾಪೂರ, ಕೃಷ್ಣಾ ಮೇಲ್ದಂಡೆ ಯೋಜನೆಯ ಬೀಳಗಿ ಎಸ್. ಎಲ್‌ಒ ಉದಯ ಕುಂಬಾರ, ಪಪಂ ಮುಖ್ಯಾಧಿಕಾರಿ ದೇವೇಂದ್ರ ಧನಪಾಲ, ಸಮಾಜ ಕಲ್ಯಾಣಾಧಿಕಾರಿ ಸಿ.ಎಸ್. ಗಡ್ಡದೇವರಮಠ, ಸಿಪಿಐ ಬಸವರಾಜ ಹಳಬನ್ನವರ, ಸಿಡಿಪಿಒ ಬಿ.ಜಿ. ಕವಟೇಕರ, ವಾಲ್ಮೀಕಿ ಸಮಾಜ ತಾಲೂಕು ಅಧ್ಯಕ್ಷ ಟಿ.ವೈ. ಜಾನಮಟ್ಟಿ, ವೀರ ಸಿಂಧೂರ ಲಕ್ಷ್ಮಣ ಟ್ರಸ್ಟ್ ಸಮಿತಿ ಅಧ್ಯಕ್ಷ ಶಂಕರ ತಳವಾರ ಇದ್ದರು.

# ಮಳೆಗೆ ಮನೆ ಗೋಡೆ ಕುಸಿತ

**ಮಹಾಲಿಂಗಪುರ:** ಕಳೆದ ಎರಡ್ಮೂರು ದಿನಗಳಿಂದ ಸುರಿದ ಮಳೆಗೆ ಪಟ್ಟಣದ ಗಡಾದ ಓಣಿ ನಿವಾಸಿ ಸಿದಗಿರೆಪ್ಪ ಕಾಗಿ ಅವರ ಮನೆ ಗೋಡೆ ಕುಸಿದು ಬಿದ್ದಿದೆ.



ಮಂಗಳವಾರ ರಾತ್ರಿ ಅಂದಾಜು 10–30 ಗಂಟೆ ವೇಳೆಗೆ ಈ ಘಟನೆ ನಡೆದಿದ್ದು, ಅವಘಡ ಸಂಭವಿಸುವುದಕ್ಕೂ ಮುನ್ನ ಮನೆಯವರು ಅದೇ ಕೋಣೆಯಲ್ಲಿ ಕುಳಿತು ಊಟ ಮಾಡಿದ್ದರು. ಬಳಿಕ ಬೇರೆ ಕೋಣೆಗೆ ತೆರಳಿದ ಬಳಿಕ ಗೋಡೆ ಕುಸಿದಿದೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಸ್ಥಳಕ್ಕೆ ಕೈಮಗ್ಗ ಮತ್ತು ಜವಳಿ ಇಲಾಖೆ ಸಹಾಯಕ ನಿರ್ದೇಶಕ ಸತೀಶ ಕಮಲದಿನ್ನಿ, ನೇಕಾರ ಮುಖಂಡ ಜಿ.ಎಸ್. ಗೊಂಬಿ ಆಗಮಿಸಿ ಪರಿಶೀಲಿಸಿದ್ದಾರೆ. ಸತೀಶ ಕಮಲದಿನ್ನಿ ಮಾತನಾಡಿ, ಮೇಲಧಿಕಾರಿಗಳಿಗೆ ಈ ಕುರಿತು ವರದಿ ಸಲ್ಲಿಸಲಾಗುವುದೆಂದು ತಿಳಿಸಿದರು. ನೇಕಾರ ಧುರೀಣ ಜಿ.ಎಸ್. ಗೊಂಬಿ ಮಾತನಾಡಿ, ಕೂಡಲೇ ಹಾನಿಯಾದ ನೇಕಾರನಿಗೆ ಸರ್ಕಾರ ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

# ಮೂರನೇ ದಿನ ಪೂರೈಸಿದ ಧರಣಿ



**ಇಳಕಲ್ಲ:** ಗ್ರಾನೈಟ್ ಶೋರೂಮ್ ಅನಧಿಕೃತ ವ್ಯಾಪಾರದ ವಿರುದ್ಧ ನಗರದಲ್ಲಿ ಕರವೇ ವತಿಯಿಂದ ಹಮ್ಮಿಕೊಂಡಿರುವ ಧರಣಿ ಸತ್ಯಾಗ್ರಹ ಬುಧವಾರ ಮೂರನೇ ಪೂರೈಸಿತು.

ಸತ್ಯಾಗ್ರಹದಲ್ಲಿದ್ದ ನಾಲ್ಕು ಜನರು ತೀವ್ರ ಅಸ್ವಸ್ಥಗೊಂಡಿದ್ದು ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕರವೇ ಬಾಗಲಕೋಟೆ ಜಿಲ್ಲಾಧ್ಯಕ್ಷ ಬಸವರಾಜ ಧರ್ಮಂತ್ರಿ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು.

ಇನ್ನೂವರೆಗೂ ಯಾವುದೇ ಅಧಿಕಾರಿಗಳು ಬೇಟಿ ನೀಡಿ ನಮ್ಮೊಂದಿಗೆ ಚರ್ಚೆ ನಡೆಸಿಲ್ಲ ಎಂದು ತಾಲೂಕು ಕರವೇ ಅಧ್ಯಕ್ಷ ಮಹಾಂತೇಶ ವಂಕಲಕುಂಟಿ ತಿಳಿಸಿದ್ದಾರೆ.

# ತುಳಜಾಪೂರಕ್ಕೆ ಪಾದಯಾತ್ರೆ




**ಇಂಡಿ :** ತಾಲೂಕಿನ ಶಿರಗೂರ ಗ್ರಾಮಸ್ಥರು ಪ್ರತಿ ವರ್ಷದಂತೆ ಮಹಾರಾಷ್ಟ್ರದ ತುಳಜಾ ಭವಾನಿ ಮಂದಿರಕ್ಕೆ ತಂಡೋಪತಂಡವಾಗಿ ಪಾದಯಾತ್ರೆ ನಡೆಸಿದರು.

ಪ್ರತಿ ವರ್ಷ ಗ್ರಾಮದ ಬಡ ಕುಟುಂಬದ ವಿದ್ಯಾರ್ಥಿಗಳ ಜೀವನ ಮುಂದಿನ ದಿನಗಳಲ್ಲಿ ಉನ್ನತ ಮಟ್ಟದ ಶಿಕ್ಷಣ ಪಡೆದು ಒಳ್ಳೆಯ ಹುದ್ದೆ ಸಿಗಲಿ ಕಂಡ ಕನಸು ನನಸಾಗಲಿ ಎಂದು ಹಾರೈಸುತ್ತಾ ಎಲ್ಲೆಡೆ ಸುಖ, ಶಾಂತಿ ನೆಮ್ಮದಿ ನೆಲಸಲಿ ಎಂದು ಪ್ರಾರ್ಥಿಸಿ ದಾಸರ ಸಂದರ್ಭದಲ್ಲಿ ಭವಾನಿ ದೇವಿಯ ದರ್ಶನಕ್ಕೆ ಪಾದಯಾತ್ರೆ ರಸ್ತೆ ಉದ್ದಕ್ಕೂ ಜೈ ಭವಾನಿ ಜೈ ಶಿವಾಜಿ ಘೋಷಣೆ ಕೂಗುತ್ತಾ ಮೂಲಕ ತೇರಳುತ್ತೇವೆ ಎಂದು ಗ್ರಾಮದ ಯುವಕರು ತಿಳಿಸುತ್ತಾರೆ.

ಈ ಸಂದರ್ಭದಲ್ಲಿ ಪ್ರವೀಣ್ ಶಿರಗೂರ, ಅಂಬಣ್ಣ ಮಡ್ಡೆ, ಆಕಾಶ್ ಗಾಯಕೋಡ್, ಶಂಕರ್ ಶಿರಗೂರ ಉಮೇಶ್ ಕಾಂಬಳೆ, ಸಂದೀಪ್ ಹರಿಜನ್, ಸುನಿಲ್ ಗಾಯಕೋಡ್, ಗೌತಮ್ ಶಿರಗೂರ, ಚಂದ್ರಕಾಂತ್ ಕಾಂಬಳೆ, ಅಸ್ಪಕ ಶೇಖ, ಶಿವರಾಜ್ ಬೋವಿ, ರಮೇಶ್ ಕಾಂಬಳೆ,ಪ್ರಜ್ವಲ್ ಅಕ್ಕಿ, ಸತೀಶ್ ಕಾಂಬಳೆ, ಸಾಮ್ರಾಟ್ ಕಾಂಬಳೆ, ಜೀವನ್ ಮಾಡ್ದೆ, ಚೇತನ್, ಸೇರಿದಂತೆ ಗ್ರಾಮದ ಮುಖಂಡರು ಯುವಕರು ಮಹಿಳೆಯರು ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

# ಜಗತ್ತಿಗೆ ರಾಮಾಯಣ ಪರಿಚಯಿಸಿದ ವಾಲ್ಮೀಕಿ

**ಇಳಕಲ್ಲ.(ಗ್ರಾ):** ರಾಮಾಯಣ ರಚಿಸಿ ಇಡೀ ಜಗತ್ತಿಗೆ ಪರಿಚಯಿಸಿದ ವಾಲ್ಮೀಕಿ ಮಹಾನ್ ಮಹರ್ಷಿ ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು.



ನಗರದ ವಾಲ್ಮೀಕಿ ದೇವಾಲಯದಲ್ಲಿ ಗುರುವಾರ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಬೇಡನಾಗಿ ಹುಟ್ಟಿ ಕೊನೆಗೆ ಮಹರ್ಷಿಯಾಗಿ ಮನುಕುಲಕ್ಕೆ ರಾಮಾಯಣ ನೀಡಿದ ಅವರನ್ನು ನೆನೆವುದೇ ಒಂದು ಪುಣ್ಯದ ಕೆಲಸ ಎಂದು ಹೇಳಿದರು.

ಗುರುಮಹಾಂತಶ್ರೀಗಳು ಸಾನ್ನಿಧ್ಯ ವಹಿಸಿದ್ದರು.

ಕೆಪಿಸಿಸಿ ಸದಸ್ಯ ಶಾಂತಕುಮಾರ ಸುರಪುರ, ತಹಸೀಲ್ದಾರ್ ಸತೀಶ ಕೂಡಲಗಿ, ನಗರಸಭೆ ಅಧ್ಯಕ್ಷೆ ಸುಧಾರಾಣಿ ಸಂಗಮ್, ಉಪಾಧ್ಯಕ್ಷೆ ಕಾಳಮ್ಮ ಜಕ್ಕಾ ಹಾಗೂ ನಗರಸಭೆ ಸದಸ್ಯರು ಹಾಗೂ ಸಮಾಜದ ಹಿರಿಯರು, ಮುಖಂಡರು, ಯುವಕರು, ಮಹಿಳೆಯರು ಇದ್ದರು. ಶಾಸಕ ವಿಜಯಾನಂದ ಕಾಶಪ್ಪನವರ ಅವರನ್ನು ಸನ್ಮಾನಿಸಲಾಯಿತು.

ತಹಸೀಲ್ದಾರ್ ಕಚೇರಿ: ನಗರದ ತಹಸೀಲ್ದಾರ್ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು.

ವಾಲ್ಮೀಕಿ ಭಾವಚಿತ್ರಕ್ಕೆ ತಹಸೀಲ್ದಾರ್ ಸತೀಶ ಕೂಡಲಗಿ ಪೂಜೆ ಸಲ್ಲಿಸಿದರು. ಉಪತಹಸೀಲ್ದಾರ್ ಈಶ್ವರ ಗಡ್ಡಿ ಸೇರಿ ತಾಲೂಕು ಆಡಳಿತ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ನಗರಸಭೆ ಕಚೇರಿ: ಇಲ್ಲಿ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ನಗರಸಭೆ ಅಧ್ಯಕ್ಷೆ ಸುಧಾರಾಣಿ ಸಂಗಮ ಉಪಾಧ್ಯಕ್ಷೆ ಕಾಳಮ್ಮ ಜಕ್ಕಾ ವಾಲ್ಮೀಕಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ನಗರಸಭೆ ಸದಸ್ಯರಾದ ಆಫ್ರೀನ್ ಸೋನಾರ, ಹನುಮಂತ ತುಂಬದ ಮುಖಂಡ ವಿಠ್ಠಲ ಜಕ್ಕಾ ಇದ್ದರು.

ಕಾಂಗ್ರೆಸ್ ಕಚೇರಿ: ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಭಾವಚಿತ್ರಕ್ಕೆ ಶಾಸಕ ವಿಜಯಾನಂದ ಕಾಶಪ್ಪನವರ ಪುಷ್ಪಾರ್ಪನೆ ಮಾಡಿದರು. ಇಳಕಲ್ಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಬ್ದುಲರಜಾಕ ತಟಗಾರ, ನಾಮನಿರ್ದೇಶಿತ ಸದಸ್ಯ ಮಲ್ಲು ಮಡಿವಾಳರ, ವಾಲ್ಮೀಕಿ ಸಮಾಜದ ಮುಖಂಡ ಮಂಜುನಾಥ ಕಟಗಿ, ಅಕ್ಷಯ ತಳವಾರ, ಶಂಕ್ರಪ್ಪ ವಾಲಿಕಾರ, ವೆಂಕಣ್ಣ ತಪ್ಪಲದಡ್ಡಿ ಮತ್ತು ಕಾರ್ಯಕರ್ತರು ಇದ್ದರು.

# ಶೀಘ್ರ ಆಸ್ಪತ್ರೆ ಆರಂಭಿಸಲು ಆಗ್ರಹ



**ಚಿಕ್ಕೋಡಿ:** ಚಿಕ್ಕೋಡಿಯಲ್ಲಿ ನಿರ್ಮಿಸಿರುವ ನೂತನ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಶೀಘ್ರವೇ ಉದ್ಘಾಟಿಸಿ, ವೈದ್ಯಕೀಯ ಸೇವೆ ಆರಂಭಿಸಬೇಕೆಂದು ಆಗ್ರಹಿಸಿ ಕರವೇ ಕಾರ್ಯಕರ್ತರು ಪಟ್ಟಣದಲ್ಲಿ ತಹಸೀಲ್ದಾರ್ ಚಿದಂಬರ ಕುಲಕರ್ಣಿ ಅವರಿಗೆ ಬುಧವಾರ ಮನವಿ ಸಲ್ಲಿಸಿದರು.

ತಾಲೂಕಿನ ಹಳ್ಳಿಗಳಿಂದ ಬರುವ ಬಡ ರೋಗಿಗಳು ಹಾಗೂ ಹೆಣ್ಣು ಮಕ್ಕಳು ಸೂಕ್ತ ಚಿಕಿತ್ಸೆ ಸಿಗದೆ ಸಮಸ್ಯೆ ಎದುರಿಸುತ್ತಿದ್ದಾರೆ. ಇಲ್ಲಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ವೈದ್ಯರು ಸಮರ್ಪಕವಾಗಿ ಸ್ಪಂದಿಸುತ್ತಿಲ್ಲ. ಅಲ್ಲದೆ, ಸೇವೆಗೆ ತಜ್ಞ ವೈದ್ಯರಿಲ್ಲ. ಎಕ್ಸರೇ, ಸ್ಕಾ?ನಿಂಗ್ ಯಂತ್ರಗಳಿಲ್ಲ. ಹೀಗಾಗಿ, ಸಣ್ಣಪುಟ್ಟ ವೈದ್ಯಕೀಯ ಚಿಕಿತ್ಸೆಗಳಿಗೂ ಇಲ್ಲಿನ ವೈದ್ಯರು ಬೆಳಗಾವಿಗೆ ಕಳುಹಿಸುತ್ತಿದ್ದಾರೆ ಎಂದು ದೂರಿದರು.

ಪಟ್ಟಣದ ಹೊರ ವಲಯದಲ್ಲಿ ಅಂದಾಜು 20 ಕೋಟಿ ರೂ. ವೆಚ್ಚದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ನಿರ್ಮಾಣಗೊಂಡಿದೆ. ಆದರೆ, ಈವರೆಗೆ ಉದ್ಘಾಟನೆಯಾಗಿಲ್ಲ. ಈ ಕು- ರಿತಾಗಿ ಅಧಿಕಾರಿಗಳಲ್ಲಿ ವಿಚಾರಿಸಿದರೆ ಹಾರಿಕೆ ಉತ್ತರ ನೀಡುತ್ತಿದ್ದಾರೆ. ಸಾರ್ವಜನಿಕರ ಹಿತದೃಷ್ಟಿಯಿಂದ ಕೂಡಲೇ ಆಸ್ಪತ್ರೆ ಉದ್ಘಾಟಿಸಿ, ಬಡ ರೋಗಿಗಳಿಗೆ ಅನುಕೂಲ ಕಲ್ಪಿಸಬೇಕೆಂದು ಮನವಿಯಲ್ಲಿ ತಿಳಿಸಿದ್ದಾರೆ.

ಕರವೇ ಪದಾಧಿಕಾರಿಗಳಾದ ಸಂಜು ಬಡಿಗೇರ, ಚಂದ್ರಕಾಂತ ಹುಕ್ಕೇರಿ, ದುಂಡಪ್ಪ ಬಡಿಗೇರ, ಅಮೂಲ ನಾವಿ, ಪ್ರತಾಪ ಪಾಟೀಲ, ಸಂಜು ಹಿರೇಮಠ, ಬಸವರಾಜ ಸಾಜನೆ, ಖಾನಪ್ಪ ಬಾಡಕರ ಇತರರಿದ್ದರು.

# ಪುನೀತ್ ರಾಜಕುಮಾರ್ ಪಾರ್ಕಿಗೆ ಬೇಕಿದೆ ಕಾಯಕಲ್ಪ

● ವಾರ್ತಾಲೋಕ ವಾರ್ತೆ

**ಬಳ್ಳಾರಿ: ಅ:22** ಬಳ್ಳಾರಿ ನಗರದ ನಲ್ಲ ಚೆರುವು ಪ್ರದೇಶದಲ್ಲಿ 2021 22ನೇ ಸಾಲಿನಲ್ಲಿ ಖನಿಜ ಪ್ರತಿಷ್ಠಾನದ ವತಿಯಿಂದ ಅಂದಾಜು 1,82, 97,000 ರೂಪಾಯಿಗಳ ಮೊತ್ತದಲ್ಲಿ ನಿರ್ಮಾಣಗೊಂಡ ಡಾ. ಪುನೀತ್ ರಾಜಕುಮಾರ್ ಪಾರ್ಕಿನಲ್ಲಿ ನಾಗರಿಕ ಸೌಲಭ್ಯ ವ್ಯವಸ್ಥೆ ಅಸ್ತವ್ಯಸ್ತಗಳ ಆಗರವಾಗಿದೆ.





ಈ ಉದ್ಯಾನವನದ ಸುತ್ತಮುತ್ತಲಿನ ಜನರು ಪ್ರತಿದಿನ ಮುಂಜಾನೆ ಮತ್ತು ಸಂಜೆ ವೇಳೆ ವಾಯುವಿಹಾರಕ್ಕೆ ಬರುವುದು ವಾಡಿಕೆ. ಆದರೆ ಇತ್ತೀಚೆಗೆ ಈ ಉದ್ಯಾನವನಕ್ಕೆ ಬರಲು ಜನರು ಹಿಂದೇಟು ಹಾಕುತ್ತಿದ್ದಾರೆ, ಕಾರಣ ಎಂದರೆ ಉದ್ಯಾನವನದ ನಿರ್ಮಾಣವಾದ ಕೆರೆಯಲ್ಲಿ ಸಂಗ್ರಹವಾದ ನೀರು ಮಲಿನಗೊಂಡು ಗಬ್ಬುನಾರುತಿದೆ. ಈ ದುರ್ನಾಥದಿಂದಾಗಿ ಜನರು ಇಲ್ಲಿಗೆ ಬರಲು ಹಿಂಜರಿಯುತ್ತಿದ್ದಾರೆ.

ಮತ್ತು ಈ ಕೆರೆಯಲ್ಲಿ ಪ್ರತಿಷ್ಠಾಪಿಸಲಾದ ಡಾಕ್ಟರ್ ಪುನೀತ್ ರಾಜಕುಮಾರ್ ಪುತ್ಥಳಿ ಸಹ ಬಿಸಿಲಿನಿಂದಾಗಿ ಮೂಲ ಬಣ್ಣವನ್ನೇ ಬದಲಾಯಿಸಿಕೊಂಡಿದೆ. ಪುತ್ತಳಿಯಲ್ಲಿ ಅಲ್ಲಲ್ಲಿ ಕಪ್ಪು ಕಲೆಗಳು ಮತ್ತು ಮೂಲ ಬಣ್ಣ ಶೇಡ್ ಆಗಿ ಇಡೀ ಪುತ್ತಳಿಯೇ ವಿರೂಪಗೊಂಡಂತಾಗಿದೆ. ಇದರಿಂದ ನಗರದ ಪುನೀತ್ ರಾಜಕುಮಾರ್ ಅಭಿಮಾನಿಗಳಿಗೆ ಸಹಜವಾಗಿ ನಿರಾಶೆಯಾಗಿದೆ.

ಬಳ್ಳಾರಿ ಮಹಾನಗರ ಪಾಲಿಕೆಯ ನಿರ್ವಹಣೆಯಲ್ಲಿರುವ ಈ ಉದ್ಯಾನವನ ಅಧಿಕಾರಿಗಳಿಂದ ಮತ್ತು ನಿರ್ವಹಣೆಗಾರರಿಂದ ನಿರ್ಲಕ್ಷಕ್ಕೆ ಒಳಗಾಗಿದೆ. ಕೌಲ್ ಬಜಾರ್, ಗದಗ್ ಬೀದಿ, ಟೀಚರ್ಸ್ ಕಾಲೋನಿ ಸೇರಿದಂತೆ ಸುತ್ತಮುತ್ತಲ ನಾಗರಿಕರಿಗೆ ವಾಯು ವಿಹಾರಕ್ಕೆ ಎಂದು ಇದೊಂದೇ ಉದ್ಯಾನವನ ಇದ್ದು ಹೀಗೆ ಅಸ್ತ ವ್ಯಸ್ತಗಡಿರುವುದರಿಂದ ಈ ಉದ್ಯಾನವನಕ್ಕೆ ವಾಯು ವಿಹಾರಕ್ಕೆ ಬರುವುದನ್ನೇ ನಿಲ್ಲಿಸಿದ್ದಾರೆ. ಕಾರಣ ಮಹಾನಗರ ಪಾಲಿಕೆವತಿಯಿಂದ ಈ ಡಾ. ಪುನೀತ್ ರಾಜಕುಮಾರ್ ಉದ್ಯಾನವನ್ನು ಮತ್ತು ಕೆರೆಯನ್ನು ಹಾಗೂ ಅದರಲ್ಲಿ ಪ್ರತಿಷ್ಠಾಪಿಸಲಾದ ಪುನೀತ್ ರಾಜಕುಮಾರ್ ಅವರ ಪುತ್ತಳಿಯನ್ನು ದುರಸ್ತಿಗೊಳಿಸಿ ಕಾಯಕಲ್ಪ ನೀಡಬೇಕಾದ ಅಗತ್ಯವಿದೆ.

ಪ್ರತಿಕ್ರಿಯೆ :

ಪುನೀತ್ ರಾಜಕುಮಾರ್ ಒಬ್ಬ ಕನ್ನಡದ ಮೇರು ಮತ್ತು ಪ್ರಬುದ್ಧ ನಟನಾಗಿದ್ದರು. ಹಾಗೆಯೇ ಅವರು ಅತ್ಯಂತ ದೊಡ್ಡ ಸಾಮಾಜಿಕ ಜವಾಬ್ದಾರಿ ನನ್ನ ಮೇಲಿದೆ ಎಂದು ತಿಳಿದುಕೊಂಡು ಬಲಗೈಯಿಂದ ಕೊಟ್ಟಿದ್ದು ಎಡಗೈಗೆ ಗೊತ್ತಾಗದ ರೀತಿಯಲ್ಲಿ ಸಮಾಜ ಸೇವೆಯನ್ನು ಮಾಡುತ್ತಿದ್ದರು. ಅನಾಥಾಶ್ರಮ ಕನ್ನಡ ಶಾಲೆ ಅಸಹಾಯಕರು ಹೀಗೆ ಎಲ್ಲಾ ರಂಗದಲ್ಲಿ ತಮ್ಮ ಸಮಾಜ ಸೇವೆಯನ್ನು ಮಾಡುತ್ತಿದ್ದರು. ಆದರೆ ಇದು ಅವರು ಜೀವಂತವಾಗಿದ್ದ ಸಂದರ್ಭದಲ್ಲಿ ಯಾರಿಗೂ ಗೊತ್ತಾಗಿಲ್ಲ. ಅವರು ಅಕಸ್ಮಾತ್ ಆಗಿ ನಿಧನರಾದ ನಂತರ ಅವರ ಸಮಾಜ ಸೇವೆಯಿಂದಲೇ ನಾಡಿನ ಜನಮನ ಗೆದ್ದಿದ್ದಾರೆ ಅವರ ಅವರ ನೆನಪಿಗಾಗಿ ನಿರ್ಮಾಣವಾದ ಈ ಉದ್ಯಾನವನ ಸ್ಥಳೀಯ ಆಡಳಿತದಿಂದ ನಿರ್ಲಕ್ಷಕ್ಕೆ ಒಳಗಾಗಿರುವುದು ಅವರ ಅಭಿಮಾನಿಗಳಿಗೆ ತೀರ ನಿರಾಶೆ ತಂದಿದೆ ಎಂದು ಅಪ್ಪು ಅಭಿಮಾನಿಗಳ ಸಂಘದ ಪದಾಧಿಕಾರಿಗಳು ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ವಿ.ಕೆ ಬಸಪ್ಪ

ಪುನೀತ್ ರಾಜಕುಮಾರ್ ಅಭಿಮಾನಿ

ಡಾಕ್ಟರ್ ಪುನೀತ್ ರಾಜಕುಮಾರ್ ಉದ್ಯಾನವನ ಎರಡು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟಿದೆ, ಅಲ್ಲಿರುವ ಕೆರೆಯಲ್ಲಿನ ನೀರು ಮಲಿನಗೊಂಡು ದುರ್ನಾಥ ಬೀರುತ್ತಿರುವುದು ಮಾಧ್ಯಮದ ವತಿಯಿಂದ ನಮ್ಮ ಗಮನಕ್ಕೆ ತಿಳಿದು ಬಂದಿದೆ. ಆ ಪ್ರದೇಶವನ್ನು ಪಾಲಿಕೆ ವತಿಯಿಂದ ಅಭಿವೃದ್ಧಿಗೊಳಿಸಲು ಕೆಲವೊಂದು ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ, ವಿದ್ಯುತ್ ದೀಪಗಳು, ವಿಶ್ರಾಂತಿ ಬೆಂಚುಗಳು ಮತ್ತು ಅತ್ಯಂತ ಮುಖ್ಯವಾಗಿ ಅಲ್ಲಿಗೆ ಭೇಟಿ ನೀಡುವ ಸಾರ್ವಜನಿಕರಿಗಾಗಿ ಫುಡ್ ಕೋರ್ಟ್ ಗಳನ್ನು ಸ್ಥಾಪಿಸಲಾಗುವುದು, ಮತ್ತು ಈ ಉದ್ಯಾನವನದ ನಿರ್ವಹಣೆಯನ್ನು ಹಾಗೂ ಪುನೀತ್ ರಾಜಕುಮಾರ್ ಪುತ್ತಳಿ ಸೇರಿದಂತೆ ನಗರದಲ್ಲಿರುವ ಎಲ್ಲಾ ಮಹನೀಯರ ಪುತ್ತಳಿಗಳನ್ನು ಪ್ರತಿ ದಿನ ಶುಭ್ರಗೊಳಿಸಿ ಹೂವಿನ ಹಾರ ಹಾಕಿ ಆ ಪ್ರದೇಶವನ್ನು ಶುಚಿಯಾಗಿ ಇಡಲು ಖಾಸಗಿಯವರಿಗೆ ಟೆಂಡರ್ ಕೊಡಲು ಪಾಲಿಕೆ ವತಿಯಿಂದ ನಿರ್ಧರಿಸಲಾಗಿದೆ.

ಮೂಲಂಗಿ ನಂದೀಶ್

ಮಹಾಪೌರರು ಬಳ್ಳಾರಿ ಮಹಾನಗರ ಪಾಲಿಕೆ

### 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ರಥಯಾತ್ರೆ

# ಆರೋಗ್ಯ ಸಚಿವರಿಂದ ರಥಕ್ಕೆ ಪುಷ್ಪ ನಮನದ ಸ್ವಾಗತ





● ವಾರ್ತಾಲೋಕ ವಾರ್ತೆ

**ಹೊಸಪೇಟೆ (ವಿಜಯನಗರ)** ಅಕ್ಟೋಬರ್ 22 (ಕ.ವಾ): ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರಾದ ದಿನೇಶ್ ಆರ್.ಗುಂಡೂರಾವ್ ಅವರು 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ರಥಯಾತ್ರೆಗೆ ಅಕ್ಟೋಬರ್ 22 ರಂದು ಹೊಸಪೇಟೆ ನಗರದ ವಾಲ್ಮೀಕಿ ವೃತ್ತದಲ್ಲಿ ರಥಕ್ಕೆ ಪುಷ್ಪ ನಮನ ಸಲ್ಲಿಸುವುದರ ಮೂಲಕ ವಿಜಯನಗರ ಜಿಲ್ಲೆಗೆ ಸ್ವಾಗತಿಸಿದರು.

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಈ ಕನ್ನಡ ರಥವು ನಾಡಿನಾದ್ಯಂತ ಸಂಚರಿಸುತ್ತಿದ್ದು, ಅಕ್ಟೋಬರ್ 22ರಂದು ವಿಜಯನಗರ ಜಿಲ್ಲೆಯ ಹೊಸಪೇಟೆಗೆ ಆಗಮಿಸಿತು. ರಥಯಾತ್ರೆಯು ಹೊಸಪೇಟೆಗೆ ಆಗಮಿಸುತ್ತಿದ್ದಂತೆ ಶಾಸಕರಾದ ಹೆಚ್. ಆರ್.ಗವಿಯಪ್ಪ, ಡಾ. ಎನ್.ಟಿ.ಶ್ರೀನಿವಾಸ್ ಮತ್ತು ಜಿಲ್ಲಾಧಿಕಾರಿ ದಿವಾಕರ್ ಎಂ.ಎಸ್ ನೇತೃತ್ವದಲ್ಲಿ ನಗರದ ವಿವಿಧ ಕನ್ನಡ ಪರ ಸಂಘಟನೆಗಳ ಪ್ರಮುಖರು ಅದ್ದೂರಿಯಾಗಿ ಸ್ವಾಗತ ಕೋರಿದರು.

ಡೊಳ್ಳು ಕುಣಿತ ಮತ್ತು ಕೋಲಾಟ, ಕನ್ನಡಾಂಬೆಯ ವಿವಿಧ ಘೋಷವಾಕ್ಯಗಳನ್ನು ಮೊಳಗಿಸುವ ಮೂಲಕ ಅದ್ದೂರಿಯಾಗಿ ರಥಯಾತ್ರೆಗೆ ಸ್ವಾಗತಿಸಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಹೋಬಳಿ ಘಟಕದ ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತಿನ ಸರ್ವ ಸದಸ್ಯರು ಮತ್ತು ಕನ್ನಡಪರ ಸಂಘಟನೆಗಳ ಪ್ರಮುಖರು ರಥಯಾತ್ರೆ ಮೆರವಣಿಗೆಯನ್ನು ಯಶಸ್ವಿಗೊಳಿಸಿದರು.

ಮೆರವಣಿಗೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ.ಕೆ ರಂಗಣ್ಣನವರ, ಹೊಸಪೇಟೆ ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕ ಅಧ್ಯಕ್ಷರಾದ ಡಾ.ಗುಂಡಿ ಮಾರುತಿ ಸೇರಿದಂತೆ ವಿವಿಧ ಅಧಿಕಾರಿಗಳು ಮತ್ತು ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರು ಹಾಗೂ ಶಾಲಾ ವಿದ್ಯಾರ್ಥಿಗಳು ಇದ್ದರು.

### ಗೋವುಗಳು ರೈತರ ಜೀವನಾಡಿ: ಅವುಗಳ ರಕ್ಷಣೆ ನಮ್ಮೆಲ್ಲರ ಹೊಣೆ ಲಸಿಕೆ ಹಾಕಿಸಿ ರಕ್ಷಿಸಿ ತಹಶಿಲ್ದಾರ್ ಪ್ರತಿಭಾ ಆರ್

# ಕಾಪು ತಾಲ್ಲೂಕಿನಲ್ಲಿ ಕಾಲುಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಚಾಲನೆ

● ವಾರ್ತಾಲೋಕ ವಾರ್ತೆ



**ಅಕ್ಟೋಬರ್ :22.** ಗೋವುಗಳು ರೈತರ ಜೀವನಾಡಿಯಾಗಿದ್ದು ಅವುಗಳ ರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ಇತ್ತೀಚೆಗೆ ಹೆಚ್ಚಾಗುತ್ತಿರುವ ಕಾಲು ಬಾಯಿ ರೋಗವನ್ನು ತಡೆಗಟ್ಟಲು ಎಲ್ಲಾ ಗೋವುಗಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕು ಎಂದು ಕಾಪು ತಹಶಿಲ್ದಾರ್ ಪ್ರತಿಭಾ ಆರ್ ತಿಳಿಸಿದರು.

ಇಂದು ಕಾಪುವಿನ ಲಕ್ಷ್ಮಿ ಜನಾರ್ಧನ ಸ್ವಾಮಿ ದೇವಸ್ಥಾನದ ಗೋಶಾಲೆಯಲ್ಲಿ ಕಾಲು ಬಾಯಿ ರೋಗ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿದ ತಹಶಿಲ್ದಾರ್ ಪ್ರತಿಭಾ ರವರು ಮಾತನಾಡಿ ಈ ಅಭಿಯಾನ ಇಡೀ ತಾಲ್ಲೂಕಿನಲ್ಲಿ ಒಂದು ತಿಂಗಳವರೆಗೆ ನಡೆಯಲಿದ್ದು,
(21-10-24 ರಿಂದ 20-10-24 ರವರೆಗೆ) ಯಾವ ಜಾನುವಾರುಗಳೂ ಹೊರತಾಗದಂತೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕೆಂದು ಪಶು ವೈದ್ಯಕೀಯ ಇಲಾಖೆಯ ವೈದ್ಯರಿಗೆ ಸೂಚನೆ ನೀಡಿದರು.

ಕಾಪುವಿನ ಗೋಶಾಲೆಯಲ್ಲಿ ಗೋವಿಗೆ ಮಾಲೆ ಹಾಕಿ, ಕುಂಕುಮ ಹಚ್ಚಿ, ಆರತಿ ಬೆಳಗಿ ಪೂಜಿಸಿ ನಂತರ ಆಹಾರ ನೀಡಿ ನಂತರ ಲಸಿಕೆ ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಾಲು ಬಾಯಿ ರೋಗ ತೀವ್ರತರವಾದ ರೋಗವಾಗಿದ್ದು ಈ ರೋಗ ಬಂದ ಜಾನುವಾರುಗಳು ನಿತ್ರಾಣಗೊಳ್ಳುತ್ತವೆ.ಹಾಲಿನ ಉತ್ಪಾದನೆ ಕಡಿಮೆಯಾಗುತ್ತದೆ. ಕೃಷಿ ಕೆಲಸ ಸಾಧ್ಯವಾಗುವುದಿಲ್ಲ. ಗರ್ಭ ಧರಿಸುವುದಿಲ್ಲ. ಗರ್ಭ ಧರಿಸಿದರೂ ಗರ್ಭಪಾತ ಆಗುವ ಸಂಭವ ಇರುತ್ತದೆ. ಹೀಗಿರುವಾಗ ಈ ರೋಗ ಬರದಂತೆ ಲಸಿಕೆ ಹಾಕಿಸಬೇಕು. ಆಗ ಕೃಷಿ ಕೆಲಸವೂ ನಿರಾತಂಕವಾಗಿ ಸಾಗುತ್ತದೆ. ಹಾಲಿನ ಉತ್ಪಾದನೆಗೂ ಧಕ್ಕೆ ಇರುವುದಿಲ್ಲ. ನಮ್ಮ ಕೃಷಿ ಕೆಲಸದಲ್ಲಿ ಅವಿಭಾಜ್ಯ ಅಂಗವಾಗಿರುವ ಜಾನುವಾರುಗಳ ಆರೋಗ್ಯ ನಿಗಾವಹಿಸಬೇಕು ಎಂದು ತಿಳಿಸಿದರು.

ಪಶು ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್ ಕಾರ್ಯಕ್ರಮ ಸಮನ್ವಯಗೊಳಿಸಿದರು.

ಗೋಶಾಲೆಯ ಮುಖ್ಯಸ್ಥರಾದ ರೋಹಿ ಕಿಣಿ, ಪಶು ವೈದ್ಯಾಧಿಕಾರಿಗಳಾದ ಪ್ರಶಾಂತ್ ವಿಜಯಕುಮಾರ್ ಹಾಗೂ ಪಶು ಸಖಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವರದಿ ಡಾ.ನಂದುಪೂಜಾರಿ ರಾಜ್ಯ

## ಹೊಸಪೇಟೆ ತಾಲೂಕಿನ ನ್ಯಾಷನಲ್ ಪ್ರಥಮ ವರ್ಷ ಪ್ರಶಿಕ್ಷಣಾ ರ್ತಿ ಗಳಿಗಾಗಿ ಆಯೋಜಿಸಿದ್ದ ಮೂರು ದಿನಗಳ ಶಿಬಿರ ಮುರಾರ್ಜಿ ದೇಸಾಯಿ ವಸತಿ ಶಾಲೆ ಉಪನಾಯಕನ ಹಳ್ಳಿ ಯಲ್ಲಿ ಯಶಸ್ವಿ ಆಗಿ ಪೂರ್ಣಗೊಂಡಿತು

● ವಾರ್ತಾಲೋಕ ವಾರ್ತೆ





**ಹೊಸಪೇಟೆ :ಅ22.** ವಿನಾಯಕ ಎಜುಕೇಶನ್ ಸೊಸೈಟಿಯ ಅಂಗ ಸಂಸ್ಥೆಯಾದ ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗಾಗಿ ಆಯೋಜಿಸಿದ್ದ 3 ದಿನಗಳ ಪೌರತ್ವ ತರಬೇತಿ ಶಿಬಿರವು ಮೊರಾರ್ಜಿ ದೇಸಾಯಿ ವಸತಿ ಶಾಲೆ ಉಪನಾಯಕನಹಳ್ಳಿ, ಹಗರಿಬೊಮ್ಮನಹಳ್ಳಿ ತಾಲೂಕು, ವಿಜಯನಗರ ಜಿಲ್ಲೆಯಲ್ಲಿ ಯಶಸ್ವಿಯಾಗಿ ಪೂರ್ಣಗೊಂಡಿತು,
ದಿನಾಂಕ 19-10-2024 ಶನಿವಾರದಿಂದ ಪ್ರಾರಂಭವಾದ ಈ ಶಿಬಿರವು ದಿನಾಂಕ 21-10-2024 ರವರೆಗೆ ನಡೆಯಿತು,
ಈ ಪೌರತ್ವ ತರಬೇತಿ ಶಿಬಿರದ ನಿರ್ದೇಶಕರು ಡಾ। ಅಯೂಬ್ ಖಾನ್ ಪ್ರಾಂಶುಪಾಲರು, ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ, ಹಾಗೂ ಈ ಕಾರ್ಯಕ್ರಮದ ಸಂಯೋಜನೆಯ ಜವಾಬ್ದಾರಿಯನ್ನು ಶ್ರೀ ವಿಕ್ರಮ್ ಕುಮಾರ್ ಬಾಳಿಕಟ್ಟಿ ಸಹಾಯಕ ಪ್ರಾಧ್ಯಾಪಕರು, ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ ಹೊಸಪೇಟೆ ಇವರು ವಹಿಸಿದ್ದರು,
ಮೊದಲನೇ ದಿನ ಈ ಶಿಬಿರವನ್ನು ಶ್ರೀ ಷಾಬು ಮೊದ್ದೀನ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ವಿಜಯನಗರ ಇವರಿಂದ ಉದ್ಘಾಟಿಸಲಾಯಿತು,
ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಶಸ್ಸು ಸಿಕ್ಕ ತಕ್ಷಣ ಅಲ್ಲಿಗೆ ನಿಮ್ಮ ಯಶಸ್ಸಿನ ಕಡೆಗಿನ ಪಯಣವನ್ನ ನಿಲ್ಲಿಸಬೇಡಿ, ಆ ಯಶಸ್ಸಿನ ವ್ಯಾಪ್ತಿಯನ್ನ ವಿಸ್ತರಿಸಿ ಎಂಬ ಸ್ಪೂರ್ತಿಯನ್ನು ಶಿಬಿರಾರ್ಥಿಗಳಿಗೆ ನೀಡಿದರು,
ತದನಂತರ ಶಿಬಿರಾರ್ಥಿಗಳು ಎಲ್ಲರೂ ಪ್ರಥಮ ದಿನದ ಪೌರತ್ವ ತರಬೇತಿ ಶಿಬಿರದ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧರಾಗಿ ಕಾರ್ಯಕ್ರಮವನ್ನು ಮೆರುಗುಗೊಳಿಸಲು ಕಾಯುತ್ತಿದ್ದರು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ರಿಶಿಕೇತ್ ರೆಡ್ಡಿ, ಪ್ರಾಂಶುಪಾಲರು ಮೊರಾರ್ಜಿ ದೇಸಾಯಿ ವಸತಿ ಶಾಲೆ ಇವರು ವಹಿಸಿದ್ದರು, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ವಾದ್ಯ ಮೊಳಗಿಸುವುದರ ಮೂಲಕ ಚಾಲನೆ ನೀಡಿದರು, ಶಿಬಿರಾರ್ಥಿಗಳು ಈ ಕಾರ್ಯಕ್ರಮವನ್ನು ನರ್ತಿಸಿ, ನಟಿಸಿ ವಿಭಿನ್ನ ಕಲೆಗಳನ್ನು ಪ್ರದರ್ಶಿಸಿ ಯಶಸ್ವಗೊಳಿಸಿದರು,
ಪೌರತ್ವ ತರಬೇತಿ ಶಿಬಿರದ ಎರಡನೇ ದಿನವು ಬೆಳಿಗ್ಗೆ ವ್ಯಾಯಾಮ & ಮತ್ತು ಯೋಗಪಟುಗಳಾದ ಶ್ರೀ ರಾಮಣ್ಣ ಹಂಪಾಪಟ್ಟಣ ಅವರು ನಡೆಸಿಕೊಟ್ಟರು, ನಂತರ ಶಿಬಿರಾರ್ಥಿಗಳು ಉಪಹಾರ ಸೇವಿಸಿ, 180 ಸಸಿಗಳನ್ನು ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನೆಟ್ಟರು, ಮತ್ತು ವಿಶೇಷ ಉಪನ್ಯಾಸಗಳನ್ನು ಸಂಪನ್ಮೂಲ ವ್ಯಕ್ತಿಗಳಿಂದ ನೀಡಲಾಯಿತು,
ಎರಡನೇ ದಿನ ಮೊದಲ ಉಪನ್ಯಾಸವನ್ನು ಜನಪದ ಕಲೆಗಳ ಮೂಲಕ ಪ್ರಸಿದ್ಧರಾದ ಸುಡುಗಾಡ ಸಿದ್ದರ ಕೈಚಳಕವನ್ನು ಶ್ರೀ ಕಿನ್ನರಿ ಲಕ್ಷ್ಮೀಪತಿ ಮತ್ತು ನಾಗರಾಜ ಗಂಟಿ ಅವರು ಮೌಢ್ಯತೆಯನ್ನು ಹೋಗಲಾಡಿಸುವುದರ ಬಗ್ಗೆ ಜಾಗೃತಿಯನ್ನು ಶಿಬಿರಾರ್ಥಿಗಳಲ್ಲಿ ಮೂಡಿಸಿದರು, ನಂತರದಲ್ಲಿ ಮಧ್ಯಾಹ್ನದ ಭೋಜನವನ್ನು ಸೇವಿಸಿದ ನಂತರ ಎರಡನೇ ಉಪನ್ಯಾಸವನ್ನು ಜನಪದ ಕಲೆಗಳ ಮೂಲಕ ಪ್ರಸಿದ್ಧರಾದ ಡಾ॥ ಜೀವನ್ ಸಾಬ್ ವಾಲಿಕರ್ ಬಿನ್ನಾಳ, ಸದಸ್ಯರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಇವರಿಂದ ನೀಡಲಾಯಿತು, ಈಗಿನ ಆಧುನಿಕ ಸಾಹಿತ್ಯಕ್ಕಿಂತ ಜಾನಪದ ಸಾಹಿತ್ಯದ ವೈಭವದ ಮೆರಗನ್ನು & ಮಹತ್ವವನ್ನು ಶಿಬಿರಾರ್ಥಿಗಳಲ್ಲಿ ಮೂಡಿಸಿದರು,
ನಂತರ ಎರಡನೇ ದಿನವು ಸಹ ಸಾಯಂಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು, ಶಿಬಿರಾರ್ಥಿಗಳು ಎರಡನೇ ದಿನವು ಸಹ ಈ ಕಾರ್ಯಕ್ರಮದಲ್ಲಿ ಉತ್ಸುಕತೆಯಿಂದ ಭಾಗವಹಿಸಿ ಯಶಸ್ವಿಗೊಳಿಸಿದರು,
ನಂತರ ಶಿಬಿರದ ಮೂರನೇ ದಿನ ಬೆಳಿಗ್ಗೆ ವ್ಯಾಯಾಮ, ಯೋಗದ ಮೂಲಕ ಪ್ರಾರಂಭವಾದ ದಿನಚರಿ ಮಧ್ಯಾಹ್ನ ಮೂರನೇ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಡಾ॥ ಬಸವರಾಜ್ ಬೆಣ್ಣಿ ಅವರು ನಗೆಹಬ್ಬ ಕಾರ್ಯಕ್ರಮದ ಮೂಲಕ ನಗುವಿನ ಮಹತ್ವವನ್ನು ಶಿಬಿರಾರ್ಥಿಗಳಿಗೆ ತಿಳಿಸಿದರು, ತದನಂತರ ಮಧ್ಯಾಹ್ನದ ಭೋಜನದ ನಂತರ ಪೌರತ್ವ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಗಿತ್ತು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ॥ ಅಯೂಬ್ ಖಾನ್ ಪ್ರಾಂಶುಪಾಲರು, ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ ಇವರು ವಹಿಸಿದ್ದರು, ಇವರ ಜೊತೆ ವಿಶೇಷ ಆಹ್ವಾನಿತರಾಗಿ ಎಸ್ ವಿ ಬಿ ಎನ್ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವಿಶ್ವನಾಥ್ ಇವರು ಉಪಸ್ಥಿತರಿದ್ದರು, ಸಮಾರೋಪ ಸಮಾರಂಭದ ಕೊನೆಯಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸುವುದರ ಮೂಲಕ ಮೂರು ದಿನಗಳ ಪೌರತ್ವ ತರಬೇತಿ ಶಿಬಿರವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಯಿತು,
ಈ ಕಾರ್ಯಕ್ರಮದಲ್ಲಿ ನಿರ್ದೇಶಕರಾಗಿ ಶ್ರೀ ಡಾ ಅಯೂಬ್ ಖಾನ್ ಪ್ರಾಂಶುಪಾಲರು, ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ,
ಈ ಕಾರ್ಯಕ್ರಮದ ಸಂಯೋಜಕರಾಗಿ, ಶ್ರೀ ವಿಕ್ರಮ್ ಕುಮಾರ್ ಬಾಳಿಕಟ್ಟಿ ಸಹಾಯಕ ಪ್ರಾಧ್ಯಾಪಕರು, ನ್ಯಾಷನಲ್ ಶಿಕ್ಷಣ ಮಹಾವಿದ್ಯಾಲಯ,
ಹಾಗೂ ಇವರ ಜೊತೆ ಶಿಬಿರಾಧಿಕಾರಿಗಳಾಗಿ, ಸಹಾಯಕ ಪ್ರಾಧ್ಯಾಪಕರುಗಳಾದ ಶ್ರೀ ಪಿ ರಾಮಸ್ವಾಮಿ ನಾಯ್ಕ್, ಶ್ರೀ ಕೆ ಬಿ ರಾಜ್ಕುಮಾರ್ ನಾಯ್ಕ್, ಮತ್ತು ಶ್ರೀ ಎಂ ಕಾರ್ತಿಕ್ ಅವರು ಸಹ ಭಾಗವಹಿಸಿದ್ದರು.

# ಪಹಣಿಗೆ ಆಧಾರ್ ಜೋಡಣೆಯಿಂದ ಭೂಅಕ್ರಮಕ್ಕೆ ಕಡಿವಾಣ



**ಕೆಜಿಎಫ್** : ಭೂಅಕ್ರಮಗಳಿಗೆ ಪೂರ್ಣ ಕಡಿವಾಣ ಹಾಕುವ ಉದ್ದೇಶದಿಂದ ಕಂದಾಯ ಇಲಾಖೆ ಜಮೀನಿನ ಪಹಣಿಗೆ ಆಧಾರ್? ಜೋಡಣೆ ಅಭಿಯಾನ ಹಮ್ಮಿಕೊಂಡಿದ್ದು, ರೈತರು ಸದ್ಬಳಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಅಕ್ರಂಪಾಷಾ ಹೇಳಿದರು.

ತಾಲೂಕು ಆಡಳಿತ ಸೌಧಕ್ಕೆ ಬುಧವಾರ ಭೇಟಿ ನೀಡಿ, ಆಧಾರ್? ಜೋಡಣೆ ಕಾ ಂ ಯ ್ ರ ್ ಪ ್ರ ಗ ತಿ ಂ ಯ ು ನ ್ನ ು ಪರಿಶೀಲಿಸಿ ಮಾತನಾಡಿದರು.

ಜನಸ್ನೇಹಿಗಾಗಿ ತಂತ್ರಜ್ಞಾನ ಬಳಕೆ ಮಾಡುತ್ತಿದ್ದು, ಪಹಣಿಗೆ ಆಧಾರ ಜೋಡಣೆಯಿಂದ ಒಬ್ಬರ ಜಮೀನನ್ನು ಮತ್ತೊಬ್ಬರು ತಮ್ಮ ಹೆಸರಿಗೆ ಅಕ್ರಮವಾಗಿ ನೋಂದಣಿ ಮಾಡಿಕೊಳ್ಳುವುದು ಸೇರಿ ಇನ್ನಿತರ ಅಕ್ರಮಗಳನ್ನು ತಡೆಗಟ್ಟಬಹುದಾಗಿದೆ ಎಂದರು.

ಈ ಹಿಂದೆ ಆಸ್ತಿ ನೋಂದಣಿ ಅವಧಿ ಕಡಿತಗೊಳಿಸಿ, ಸಾರ್ವಜನಿಕರಿಗೆ ಶೀಘ್ರವಾಗಿ ಸೇವೆ ನೀಡುವ ಉದ್ದೇಶದಿಂದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಕಾವೇರಿ- ತಂತ್ರಾಂಶ ಜಾರಿಗೆ ತರಲಾಗಿತ್ತು. ಇದೀಗ ಕಂದಾಯ ಇಲಾಖೆಯನ್ನು ಮತ್ತಷ್ಟು ಜ ನ ಸ್ನ ೇ ಹಿ ಂ ಯ ು ನ ್ನಾ ಗಿ ಸ ು ವ ಸಲುವಾಗಿ ಆರ್?ಟಿಸಿಗೆ ಆಧಾರ್? ಜೋಡಣೆ ಹಾಗೂ ಎನಿವೇರ್? ನೋಂದಣಿ ವ್ಯವಸ್ಥೆಗೆ ಚಾಲನೆ ನೀಡಲಾಗಿದೆ ಎಂದು ಡಿಸಿ ತಿಳಿಸಿದರು.

ಶತಮಾನದ ಬೇಕರಿಗೆ ಭೇಟಿ

ನಗರದ ಉರಿಗಾಂನಲ್ಲಿನ 140 ವರ್ಷಗಳ ಹಳೇದಾದ ಗೋಲ್ಡ್? ಫೀಲ್ಡ್? ಬೇಕರಿಗೆ ಜಿಲ್ಲಾಧಿಕಾರಿ ಅಕ್ರಂ ಪಾಷಾ ಭೇಟಿ ನೀಡಿ, ಮೂರು ತಲೆಮಾರುಗಳಿಂದ ಬೇಕರಿ ಮುನ್ನಡಿಸಿಕೊಂಡು ಬರುತ್ತಿರುವುದಲ್ಲದೇ ಬ್ರಿಟಿಷರ ಕಾಲದ ಓವೆನ್?ನಲ್ಲಿ ತಯಾರಿಸುವ ಮೂಲಕ ವಿಶೇಷವಾದ ತಿನಿಸುಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಚಿನ್ನದ ಗಣಿಗಳನ್ನು ಮುಚ್ಚಿ 24 ವರ್ಷಗಳು ಕಳೆದರೂ ಇಂದಿಗೂ ಬೇಕರಿಯು ತಿಂಡಿತಿನಿಸುಗಳ ಗುಣಮಟ್ಟ ಕಾಪಾಡಿಕೊಂಡು ಬರುತ್ತಿದ್ದು, ಗೋಲ್ಡ್?ಪೀಲ್ಡ್? ಬೇಕರಿಗೆ ಗ್ರಾಹಕರು ಈಗಲೂ ಮುಗಿ ಬೀಳುತ್ತಾರೆ. ಅದರಲ್ಲೂ ಇಲ್ಲಿನ ದಿಲ್?ಪಸಂದ್? ಸವಿದರೆ ಮತೊಮ್ಮೆ ತಿನ್ನಬೇಕೆನ್ನಿಸುತ್ತದೆ. 140 ವರ್ಷಗಳ ಇತಿಹಾಸ ಹೊಂದಿರುವ ಗೋಲ್ಡ್? ಫೀಲ್ಡ್? ಬೇಕರಿಯಲ್ಲಿ ತಯಾರಿಸಲು ತಿಂಡಿಗಳ ಹೆಸರನ್ನು ಪ್ರವಾಸೋದ್ಯಮ ಇಲಾಖೆಯ ವಿಶೇಷ ತಿನಿಸುಗಳ ಪಟ್ಟಿಗೆ ಸೇರಿಸಲು ನಿರ್ದೇಶಕ-ರಿಗೆ ಸೂಚಿಸಲಾಗುವುದು ಎಂದು ಜಿಲ್ಲಾಧಿಕಾರಿ ಭರವಸೆ ನೀಡಿದರು.

## ಸಿಡಿಲಿಗೆ 20 ಕುರಿಗಳು ಬಲಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ

● ವಾರ್ತಾಲೋಕ ವಾರ್ತೆ




**ಕೂಡ್ಲಿಗಿ: ಅ22.** ತಾಲೂಕಿನ ಜುಮ್ಮೋಬನಹಳ್ಳಿ ಗ್ರಾಮದಲ್ಲಿ ಸೋಮವಾರ ಮಧ್ಯಾನ 3:30ಕ್ಕೆ ಬಾರಿ ಗುಡುಗು ಮಿಂಚು ಮಿಶ್ರಿತ ಮಳೆಯಾಗಿದ್ದು, ಅಲ್ಲದೆ ಭಾರಿ ಪ್ರಮಾಣದ ಸಿಡಿಲು ಬಡಿದ ಪರಿಣಾಮ 20 ಕುರಿಗಳು ಬಲಿಯಾದ ಘಟನೆ ಜರುಗಿದೆ. ಗ್ರಾಮದ ಹೊರವಲಯದ ಅರಣ್ಯ ಪ್ರದೇಶದಲ್ಲಿ ಮೇಲು ಹೋಗಿದ್ದಾಗ ಗುಡುಗು, ಮಿಂಚು, ಮಿಶ್ರಿತ ಮಳೆಯಾಗಿದ್ದು, ಕುರಿಗಳು ಗಿಡಗಳ ಕೆಳಗಡೆ ನಿಂತಿದರಿಂದ ಭಾರಿ ಪ್ರಮಾಣದ ಸಿಡಿಲು ಬಡಿದ ಪರಿಣಾಮ ಸಣ್ಣ ಓಬಯ್ಯರ ಬಡಕಯ್ಯ, ಜಿ ಬಡಕಯ್ಯ, ಬಿ ಬೋರಯ್ಯ ಇವರ ಮೂವರಿಗೆ ಸೇರಿದ 20 ಕುರಿಗಳಿಗೆ ಸಿಡಿಲಿನ ಹೊಡೆತಕ್ಕೆ ಮೃತ ಪಟ್ಟಿದ್ದಾವೆ, ಅಂದಾಜು 1 ಲಕ್ಷಕ್ಕೂ ಅಧಿಕ ನಷ್ಟವಾಗಿದೆ ಎಂದು ಕಂದಾಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಎರಡು ಲಕ್ಷಕ್ಕೂ ಹೆಚ್ಚು ನಷ್ಟವಾಗಿರಬಹುದೆಂದು ಕುರಿ ಮಾಲೀಕರು ತಿಳಿಸುತ್ತಾ ಅಲ್ಲದೆ ಕುರಿಗಾಯಿಗರಿಗೆ ಸೂಕ್ತ ಪರಿಹಾರವನ್ನು ತಾಲೂಕು ಆಡಳಿತ ಕಲ್ಪಿಸಬೇಕೆಂದು ಇಲ್ಲಿನ ಮುಖಂಡರು ರೈತರು ಮನವಿ ಮಾಡಿದ್ದಾರೆ. ಸ್ಥಳಕ್ಕೆ ಕಂದಾಯ ಇಲಾಖೆ ಸಿಬ್ಬಂದಿ ಹಾಗೂ ಪಶು ವೈದಧಿಕಾರಿಗಳು, ಹೊಸಹಳ್ಳಿ ಪೊಲೀಸರು ಘಟನಾ ಸ್ಥಳಕ್ಕೆ ತೆರಳಿ ಪರಿಶೀಲಿಸಿ ಮುಂದಿನ ಕ್ರಮಕ್ಕೈಗೊಂಡಿದ್ದಾರೆ.

ವರದಿ ಎಚ್ ವೀರಣ್ಣ.



# ಕನ್ನಡ ಜ್ಯೋತಿ ಹೊತ್ತ ರಥಕ್ಕೆ ಕಮಲಾಪುರದಲ್ಲಿ ಅದ್ದೂರಿ ಸ್ವಾಗತ

● ವಾರ್ತಾಲೋಕ ವಾರ್ತೆ





**ಹೊಸಪೇಟೆ** : ಅ 22. ಅಕ್ಟೋಬರ್ 20 ರಿಂದ 22 ವರೆಗೆ ಮಂಡ್ಯ ಜಿಲ್ಲೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಕನ್ನಡ ಜ್ಯೋತಿಯನ್ನು ಹೊತ್ತ ಕನ್ನಡ ರಥವನ್ನು ತಹಸಿಲ್ದಾರ್ ಶೃತಿ ಎಂ ಮಲ್ಲಪ್ಪ ಗೌಡರ್ ಮತ್ತು ಬುಕ್ಕಸಾಗರ ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಮತ್ತು ಸದಸ್ಯರೊಂದಿಗೆ ಕನ್ನಡ ರಥವನ್ನು ರಿಸೀವ್ ಮಾಡಿಕೊಂಡು ಕಮಲಾಪುರ ಪಟ್ಟಣಕ್ಕೆ ಆಗಮಿಸಿದಾಗ ಪುರಸಭೆಯ ಅಧಿಕಾರಿಗಳು ಹಾಗೂ ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯರು, ಮಹಿಳೆಯರು ಹಾಗೂ ಕಳಶ ಹೊತ್ತ ಪುಟ್ಟ ಮಕ್ಕಳು ಸಡಗರ ಸಂಭ್ರಮದಿಂದ ಸ್ವಾಗತಿಸಿಕೊಂಡರು.

ಕನ್ನಡ ಸಮ್ಮೇಳನ ಕೇವಲ ಮಂಡ್ಯ ಜಿಲ್ಲೆಗೆ ಅಷ್ಟೇ ಸೀಮಿತವಾಗಬಾರದು ಇಡೀ ರಾಜ್ಯಕ್ಕೆ ತಿಳಿಯಬೇಕು ಎನ್ನುವ ಉದ್ದೇಶದಿಂದ ಕನ್ನಡ ರಥದ ಬಗ್ಗೆ, ಕನ್ನಡ ಭಾಷೆಯ ಬಗ್ಗೆ, ಕನ್ನಡ ಸಂಸ್ಕೃತಿಯ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಈ ಕನ್ನಡ ರಥ ಇಡೀ ರಾಜ್ಯದ್ಯಂತ ಸಂಚರಿಸುತ್ತಾ ಇದೆ ಈ ನಿಟ್ಟಿನಲ್ಲಿ ಬುಕ್ಕಸಾಗರದಿಂದ ಬರಮಾಡಿಕೊಂಡು ಕಮಲಾಪುರ ಮಾರ್ಗವಾಗಿ ಹೊಸಪೇಟೆಗೆ ತೆರಳಿ ನಗರದಲ್ಲಿ ಸಂಚರಿಸಿದ ಬಳಿಕ ಮರಿಯಮ್ಮನಹಳ್ಳಿಗೆ ತಲುಪಿ ಅಲ್ಲಿಂದ ಹಗರಿಬೊಮ್ಮನಹಳ್ಳಿಗೆ ಬೀಳ್ಕೊಡುತ್ತೇವೆ ಎಂದು ತಹಸಿಲ್ದಾರರಾದ ಶ್ರುತಿ ಗೌಡರ್ ಡಾ. ಬಿ ಆರ್ ಅಂಬೇಡ್ಕರ್ ರವರ ಪುತ್ತಳಿಗೆ ಹೂ ಮಾಲೆ ಹಾಕಿ ಮಾತನಾಡಿದರು.

ಕನ್ನಡ ಕೇವಲ ಭಾಷೆಯಲ್ಲ.ಅದಕ್ಕೆ ತನ್ನದೇ ಆದ ನೆಲ, ಜಲ, ಸಂಸ್ಕೃತಿಯ ಇತಿಹಾಸವಿದೆ ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮೂರು ದಿನಗಳ ಕಾಲ ನಡೆಯಲಿದ್ದು ಸಮ್ಮೇಳನ ಯಶಸ್ವಿಯಾಗಲಿ ಎಂದು ಹಾರೈಸಿದರು.

ಈ ಕುರಿತು ಎಲ್.ಹಾಲ್ಯಾನಾಯ್ಕ ಸಂಘಟನಾ ಕಾರ್ಯದರ್ಶಿ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಘಟಕ ಹೊಸಪೇಟೆ ಇವರು ಮಾತನಾಡಿ ನೂರು ಭಾಷೆ ನಾಲಿಗೆಯಲ್ಲಿರಲಿ ಕನ್ನಡ ಭಾಷೆ ಹೃದಯದಲ್ಲಿರಲಿ 20 ರಿಂದ 22ರವರೆಗೆ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡ ಜ್ಯೋತಿ ರಥವು 87 ದಿನಗಳ ಕಾಲ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಸಂಚರಿಸಲಿದೆ. ಈ ರಥಯಾತ್ರೆಯ ಮೂಲಕ ಕನ್ನಡ ನಾಡು, ನುಡಿ, ಜಲ, ಸಂಸ್ಕೃತಿಯನ್ನು ಕನ್ನಡ ನೆಲದ ಭವ್ಯ ಪರಂಪರೆಯನ್ನು ಎಲ್ಲಡೆ ಬಿಂಬಿಸುವ ಮತ್ತು ಜಾಗೃತಿ ಮೂಡಿಸುವ ಸಲುವಾಗಿ ಕನ್ನಡ ನಾಡಿನ ನಾವೆಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಪುರಸಭೆ ಮುಖ್ಯ ಅಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ ಕನ್ನಡ ಭಾಷೆ ಬೆಳೆಸುವ ಮನೋಭಾವ ಪ್ರತಿಯೊಬ್ಬರಲ್ಲೂ ಮೂಡಬೇಕು, ಕನ್ನಡ ಅಭಿಮಾನವನ್ನು ಎತ್ತಿ ತೋರಿಸಬೇಕು.ಪಟ್ಟಣಕ್ಕೆ 9 ಗಂಟೆಗೆ ಬರಬೇಕಾಗಿದ್ದ ಕನ್ನಡ ರಥ ಎರಡು ಗಂಟೆಗಳ ತಡವಾಗಿ ಬಂದರೂ ಕೂಡ ನಮ್ಮಲ್ಲಿರುವ ಉತ್ಸಾಹ ಸ್ವಲ್ಪವೂ ಕಡಿಮೆಯಾಗಿಲ್ಲ ಕಾರಣ ಕನ್ನಡವೇ ಸತ್ಯ ಕನ್ನಡವೇ ನಿತ್ಯ ಎಂದು ಕನ್ನಡ ರಥವನ್ನು ಸ್ವಾಗತಿಸಿ ಭುವನೇಶ್ವರಿ ಮೂರ್ತಿಗೆ ಪೂಜೆ ಸಲ್ಲಿಸಿ ಪ್ರಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಕಂದಾಯ ನಿರೀಕ್ಷಕ ಅನಿಲ್ ಕುಮಾರ್, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಭಾಷಾ,ಪುರಸಭೆ ಸದಸ್ಯರಾದ ರವಿಕುಮಾರ್,ಮಾಳಗಿ ರಾಮಸ್ವಾಮಿ, ಮಾಜಿ ಉಪಾಧ್ಯಕ್ಷರಾದ ತಿಪ್ಪೇಸ್ವಾಮಿ, ಮುಖಂಡ ವೀರೇಶ್ ಕೊಟ್ಟಾಲ್, ಪುರಸಭೆ ಅಧಿಕಾರಿ ಟಿ ಮಂಜುನಾಥ, ಮಲ್ಲಿಕಾರ್ಜುನ, ವಿ ಎಚ್ ಪತ್ತಾರ್, ಟಿ ಎನ್ ಲತಾ,ಎಸ್ ಎಮ್ ಟಿಪ್ಪು, ನಸೀಮ ಬಾನು, ರಾಮಪ್ಪ,ಕೆ ಲಕ್ಷ್ಮಿ,ಎನ್ ಪಿ ಅರವಿಂದ್ ಕುಮಾರ್,ವೀರೇಶ, ಸಿಕಂದರ್, ಹರೀಶ್, ಇತರರು ಇದ್ದರು.

ವರದಿ ಎ ಚಿದಾನಂದ

VARTHALOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com